International Journal of Kannada Research
www.kannadajournal.com

**ISSN: 2454–5813**
IJKR 2019; 5(3): 42-55
© 2019 IJKR
www.kannadajournal.com
Received: 28-05-2019
Accepted: 30-06-2019

**ಮುನಿರಾಜು ಎಸ್.ವಿ**
ಸಂಶೋಧನ ವಿದ್ಯಾರ್ಥಿ, ಕನ್ನಡ ಭಾಷೆ ಮತ್ತು ಭಾಷಾಂತರ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಶ್ರೀನಿವಾಸವನಂ, ಕುಪ್ಪಂ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ

**Correspondence**
**ಮುನಿರಾಜು ಎಸ್.ವಿ**
ಸಂಶೋಧನ ವಿದ್ಯಾರ್ಥಿ, ಕನ್ನಡ ಭಾಷೆ ಮತ್ತು ಭಾಷಾಂತರ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಶ್ರೀನಿವಾಸವನಂ, ಕುಪ್ಪಂ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ

# ಡಾ. ಸಾ.ಶಿ.ಮರುಳಯ್ಯನವರ ನೃತ್ಯರೂಪಕಗಳಲ್ಲಿ ವೈಚಾರಿಕತೆಯ ಅನುಸಂಧಾನ

**ಮುನಿರಾಜು ಎಸ್.ವಿ**

ಸಂಸ್ಕೃತಿ ಮತ್ತು ನಾಗರೀಕತೆಯು ಬೆಳೆದಂತೆಲ್ಲಾ ಮನುಷ್ಯನ ಬುದ್ಧಿ ವಿಕಾಸವಾಗುತ್ತಾ ಹಲವಾರು ಘಟ್ಟವನ್ನು ಕಳೆದಿದೆ. ಹೀಗೆ ಮನುಷ್ಯನ ಬುದ್ಧಿ ವಿಕಾಸದ ಹಂತದಲ್ಲಿ ಏನು? ಏಕೆ? ಹೇಗೆ? ಎಂಬ ಹಲವಾರು ಪ್ರಶ್ನೆಗಳಿಗೆ ತನ್ನ ಆಲೋಚನಾ ಶಕ್ತಿಯಿಂದ ಉತ್ತರಗಳನ್ನು ಕಂಡುಕೊಂಡನು. ಇದನ್ನೇ ವಿಚಾರದ ಹಾದಿ ಎಂದು ಹೇಳಬಹುದು. ಜಾಗತಿಕ ಸಾಹಿತ್ಯದಲ್ಲಿ ವಿಚಾರ ಸಾಹಿತ್ಯ ಪರಂಪರೆಯು ತನ್ನದೆ ಆದ ಸ್ವರೂಪವನ್ನು ಹೊಂದಿದೆ. ಕನ್ನಡ ಸಾಹಿತ್ಯದಲ್ಲಿ ವಿಚಾರ ಸಾಹಿತ್ಯವು ತನ್ನ ಛಾಪನ್ನು ಹೊಂದಿದ್ದು, ಕನ್ನಡ ಸಾಹಿತ್ಯದ ಪ್ರಕಾರಗಳಲ್ಲಿ ಪ್ರಮುಖವಾಗಿ ಕಾಣಿಸಿಕೊಂಡಿದೆ.

ಕನ್ನಡ ಸಾಹಿತ್ಯದಲ್ಲಿ ವೈಚಾರಿಕತೆಯು ಹಲವು ಮಜಲುಗಳಲ್ಲಿ ಬೆಳೆದಿದೆ. ಕನ್ನಡ ನಾಡಿನ ಪ್ರಜ್ಞಾವಂತರ ಆಯ್ಕೆಯ ಮಾದರಿಯಾಗಿ ವೈಚಾರಿಕತೆಯು ಸಾಹಿತ್ಯದ ಮೂಲಕ ಅಭಿವ್ಯಕ್ತವಾಗಿದೆ. ಆಧುನಿಕ ಸಾಹಿತಿಗಳ ವೈಚಾರಿಕ ಮನೋಭಾವವು ವ್ಯಕ್ತಿಯ ಸಾಮಾಜಿಕ ಹಿನ್ನಲೆ ಮತ್ತು ಅವನು ಬೆಳೆದು ಬಂದ ಪರಿಸರಕ್ಕನುಗುಣವಾಗಿ ರೂಪುಗೊಂಡಿದೆ. ಹೊಸ ಶಿಕ್ಷಣ, ಸಾರಿಗೆ, ಸಂಪರ್ಕ, ಸುಧಾರಣಾವಾದ ಚಳುವಳಿ... ಮುಂತಾದವುಗಳು ಹೊಸ ಜೀವನ ವಿಧಾನ ರೂಪುಗೊಳ್ಳಲು ಕಾರಣವಾದವು. ಲೇಖಕರು ತಾವು ಹುಟ್ಟಿ ಬೆಳೆದ ಪರಿಸರದಲ್ಲಿ ಆಗುವ ಪರಿವರ್ತನೆಯನ್ನು ತಾವು ಪಡೆದ ಆಧುನಿಕ ಶಿಕ್ಷಣದಿಂದ ಹಾಗೂ ಪಶ್ಚಿಮದ ಸಾಹಿತ್ಯಿಕ ಬೆಳವಣಿಗೆಯ ನೆರವಿನಿಂದ ಅಧ್ಯಯನ ಮಾಡಿದರು. ಅದರಲ್ಲೂ ಈ ಆಧುನಿಕತೆ ಎನ್ನುವುದು ಹೊಸಗನ್ನಡದ ಅನೇಕ ಲೇಖಕರಲ್ಲಿ ಮಹತ್ತರವಾದ ಆಲೋಚನೆಗಳ ಅಭಿವ್ಯಕ್ತಿಗೆ ಸಾಕ್ಷಿಯಾಗಿದೆ. ಬದಲಾದ ಕಾಲ, ಬದಲಾದ ಸಾಂಸ್ಕೃತಿಕ ಸನ್ನಿವೇಶಗಳು ಪರಂಪರೆಯ ಜೊತೆಗೆ ಮುಖಾಮುಖಿಯಾಗುತ್ತಲೇ, ಅನುಸಂಧಾನಗೊಳ್ಳುತ್ತಲೇ, ಸಂಘರ್ಷಕ್ಕೊಳಗಾಗುತ್ತಲೇ ಅನೇಕ ಬಗೆಯ ಚಿಂತನೆಗಳನ್ನು ಹುಟ್ಟುಹಾಕಿದವು. ಅದು ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ– ಹೀಗೆ ಭಿನ್ನ ನೆಲೆಗಳಲ್ಲಿ, ಭಿನ್ನ ಆಯಾಮಗಳಲ್ಲಿ ವ್ಯಕ್ತವಾದದ್ದಾಗಿದೆ. ಅದು ಒಬ್ಬ ಸಂವೇದನಾಶೀಲ ಲೇಖಕನಿಂದ ಮತ್ತೊಬ್ಬ ಲೇಖಕನಲ್ಲಿ ವಿಭಿನ್ನತೆಯನ್ನು ಗುರುತಿಸುವುದಕ್ಕೆ ಸಹಕಾರಿಯಾಯಿತು. ಆಲೋಚನೆಯಲ್ಲಿ ವ್ಯಕ್ತವಾದ ವೈಚಾರಿಕತೆಯು ಬರಹ ರೂಪಕ್ಕಿಳಿದಾಗ ಅದು ಓದುಗರಲ್ಲಿಯೂ ಹೊಸ ವೈಚಾರಿಕ ನೆಲೆಯನ್ನು ಹುಟ್ಟುಹಾಕಿದೆ.

ಕಾಲದ ಅಗತ್ಯಕ್ಕನುಗುಣವಾಗಿ ಹುಟ್ಟಿಕೊಂಡ ವೈಚಾರಿಕ ಪ್ರಜ್ಞೆಯನ್ನು ಹೊಸಗನ್ನಡ ಸಂದರ್ಭದಲ್ಲಿ ಅನೇಕ ಲೇಖಕರು ತಮ್ಮದೇ ಆದ ಶೈಲಿಯಲ್ಲಿ ತಮ್ಮ ಬರಹಗಳ ಮೂಲಕ ಅಭಿವ್ಯಕ್ತಿಸಿದ್ದಾರೆ. ಅಂತಹ ಲೇಖಕರಲ್ಲಿ ಡಾ.ಸಾ.ಶಿ.ಮರುಳಯ್ಯನವರೂ ಪ್ರಮುಖರು. ಬದುಕಿನುದ್ದಕ್ಕೂ ಕನ್ನಡದ ಸೇವಕರಾಗಿಯೇ ಇದ್ದ ಸಾ.ಶಿ.ಮರುಳಯ್ಯನವರನ್ನು ರೂಪಿಸಿದ್ದು ಕನ್ನಡತನ ಮತ್ತು ಕನ್ನಡ ಚಿಂತನೆಗಳು. ಪರಂಪರೆ ಮತ್ತು ವರ್ತಮಾನದೊಂದಿಗಿನ ಅವರ ಅನುಸಂಧಾನವಾಗಲಿ, ಮುಖಾಮುಖಿಯಾಗಲಿ ಕನ್ನಡ ಸಾರಸ್ವತ ಲೋಕದಲ್ಲಿ ಹೊಸ ಬಗೆಯ ತಾತ್ವಿಕ ವೈಚಾರಿಕತೆಯ ಹುಟ್ಟಿಗೆ ಕಾರಣವಾಗಿವೆ. ಸರಳ, ಸುಂದರವಾದ ಅವರ ಬರಹಗಳಲ್ಲಿ ಪ್ರಕೃತಿ ಪ್ರೀತಿಯೊಂದಿಗೆ ಸಮಾಜಮುಖಿ ಚಿಂತನೆಯೂ ಇದೆ. ಕೇವಲ ಬರವಣಿಗೆಯಲ್ಲಷ್ಟೇ ಅಲ್ಲ ಬದುಕಿನಲ್ಲಿಯೂ ಅನೇಕ ಹೊಸ ವೈಚಾರಿಕತೆಗಳನ್ನು ಅಳವಡಿಸಿಕೊಂಡವರು ಸಾ.ಶಿ.ಮರುಳಯ್ಯನವರು. ಹಾಗಾಗಿ ಅವರು ಬದುಕಿದಂತೆ ಬರೆದರು, ಬರೆದಂತೆ ಬದುಕಿದರು. ಅಂತಹ ವಿಭಿನ್ನ ವೈಚಾರಿಕ ಚಿಂತನೆಯ ಸಾಹಿತ್ಯದಲ್ಲಿನ ವೈಚಾರಿಕತೆಯ ಸ್ವರೂಪವನ್ನು ಈ ಲೇಖನದಲ್ಲಿ ಚರ್ಚಿಸಲಾಗುವುದು.

ಸಾಹಿತ್ಯವು ನಿರಂತರ ಹರಿಯುವ ನೀರಿನಂತೆ ಬದಲಾವಣೆಯಾಗುತ್ತಿರುತ್ತದೆ. ಇದು ಸಾಹಿತ್ಯದ ಮುಖ್ಯ ಲಕ್ಷಣವಾಗಿದೆ. ಸಮಕಾಲೀನ ಸಮಾಜ ಹಾಗೂ ಪರಿಸರದ ಪ್ರೇರಣೆಗೆ ಅನುಗುಣವಾಗಿ ಸಾಹಿತಿಯ ಮನೋಧರ್ಮ ಚಿಂತನೆಯ ರೀತಿ ನೀತಿ ಬದಲಾಗುತ್ತಾ ಸಾಗುತ್ತಿರುತ್ತದೆ. ಹತ್ತೊಂಬತ್ತನೇಯ ಶತಮಾನದ ಕೊನೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸಘಟ್ಟ ಪ್ರಾರಂಭವಾಯಿತು. ಪಾಶ್ಚಾತ್ಯ ಶಿಕ್ಷಣ ಪದ್ಧತಿ ಹಾಗೂ ಇಂಗ್ಲೀಷ್ ಸಾಹಿತ್ಯದ ಅಭ್ಯಾಸಗಳು ಹೊಸ ವಿಚಾರದ ಆಚಾರಗಳನ್ನು ಜನರಲ್ಲಿ ಬಿಂಬಿಸುವ ಮೂಲಕ ವೈಶಿಷ್ಟ್ಯಮಯ ಸಾಹಿತ್ಯವು ಮೂಡಲು ಕಾರಣವಾಯಿತು. ಹೊಸಗನ್ನಡ ಸಾಹಿತ್ಯ ರೂಪಗಳಿಗೆ ವಿಜ್ಞಾನ ವೈಚಾರಿಕ ಮನೋಧರ್ಮ, ಜಾತ್ಯಾತೀತತೆ ಮುಂತಾದವು ಪ್ರೇರಣೆಯನ್ನು ನೀಡಿದವು. ಧರ್ಮವೇ ಕೇಂದ್ರವಾಗಿದ್ದ ಸಾಹಿತ್ಯ ಮಾನವ ಕೇಂದ್ರವಾಯಿತು. ಜನ ಸಾಮಾನ್ಯರ ಬದುಕು ಕಷ್ಟ–ನಷ್ಟ ಏರುಪೇರುಗಳನ್ನು ಕುರಿತ ವಸ್ತುಗಳನ್ನಾಯ್ದು ಕತೆ, ಕಾದಂಬರಿ, ಕಾವ್ಯ, ನಾಟಕ, ನಿಬಂಧ–ಪ್ರಬಂಧಗಳು ಸೃಷ್ಟಿಯಾಗತೊಡಗಿದವು.

ಸಾಹಿತ್ಯವು ಆಯಾಯ ಕಾಲ ಸಂದರ್ಭದ ಪ್ರೇರಣೆ ಪ್ರಭಾವಗಳಿಗೆ ಒಳಗಾಗುತ್ತಲೇ ತನ್ನ ಅಭಿವ್ಯಕ್ತಿಯ ಸಾಧ್ಯತೆಗಳನ್ನು ಕಂಡು ಕೊಂಡಿರುತ್ತದೆ. ಈ ಅಭಿವ್ಯಕ್ತಿಯು ಎಲ್ಲ ಕಾಲ ಸಂದರ್ಭಕ್ಕೂ ಎಲ್ಲ ಬರಹಗಾರರಲ್ಲೂ ಒಂದೇ ಆಗಿರಲು ಸಾಧ್ಯವಿಲ್ಲ. ಬರಹಗಾರನ ತಾತ್ವಿಕ ನಿಲುವು ಬದ್ಧತೆಗಳು ಆ ಕಾಲ ಸಂದರ್ಭದ ತುರ್ತು ಅಭಿವ್ಯಕ್ತಿಯ ಸಾಧ್ಯತೆಗಳನ್ನು ನಿರ್ಧರಿಸುತ್ತವೆ. ಆಧುನಿಕ ಕನ್ನಡ ಸಾಹಿತ್ಯ ಆರಂಭದ ಘಟ್ಟದಲ್ಲಿ ಪರಂಪರೆ ಹಾಗೂ ವರ್ತಮಾನದ ಸಂಗತಿಗಳನ್ನು ಧರ್ಮ ಕೇಂದ್ರಿತ ನೆಲೆಯಿಂದಲೇ ಅರ್ಥ ಮಾಡಿಕೊಂಡಿತು. ವೈಜ್ಞಾನಿಕ ನೆಲೆಗಟ್ಟಿನಲ್ಲಿ ಭಾವಪ್ರಧಾನವಾದ ನೋಟದ ಪರಿಣಾಮವಾಗಿ ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯವು ವಿಭಿನ್ನತೆಯನ್ನು ಹೊಂದಿದ್ದು ಸಮಾಜದ ನೋಟಗಳನ್ನು ಅತ್ಯಂತ ವೈಚಾರಿಕ ನೆಲೆಯಿಂದ ನೋಡುವ ಹೊಸ ದೃಷ್ಟಿಕೋನವೊಂದು ಬೆಳೆಯಿತು. ಸಾಹಿತ್ಯವು ಮೊದಲಿಗೆ ಸಾಮಾಜಿಕ ಪರಿಭಾಷೆಯಲ್ಲಿ ಪ್ರತಿಕ್ರಿಯಿಸಿತು. ಸ್ವಾತಂತ್ರ್ಯ ಸಮಾನತೆಯ ಸಮಾಜವನ್ನು ಸ್ಥಾಪಿಸುವ ಉದ್ದೇಶಗಳನ್ನು ಪ್ರಕಟಿಸುತ್ತಾ ಆಧುನಿಕ ಕನ್ನಡ ಸಾಹಿತ್ಯವು ಸಮಾಜಮುಖಿ ಚಿಂತನೆಗೆ ಒತ್ತು ನೀಡಿತ್ತು. ಕಳೆದ ಶತಮಾನದ ಆರಂಭದ ದಶಕಗಳಿಂದಲೂ ಸಾಹಿತ್ಯದ ಉದ್ದೇಶಗಳು ಸಾಮಾಜಿಕವಾದದ್ದಾಗಿದ್ದು, ಸಮಾಜವನ್ನು ಅರ್ಥ ಮಾಡಿಕೊಳ್ಳುವ ಹೊಸ ಸಾಧ್ಯತೆಗಳು, ಹೊಸ ಸಮಾಜದ ಪರಿಕಲ್ಪನೆಗಳು ಸಾಹಿತ್ಯದ ಮುಖ್ಯವಾಹಿನಿಯಲ್ಲಿ ಕಂಡುಬಂದು ಅಸಮಾನತೆಗಳನ್ನು ಅತ್ಯಂತ ವೈಚಾರಿಕವಾಗಿ ಪ್ರಶ್ನಿಸುವುದರ ಮೂಲಕ ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಯ ಹಕ್ಕೊತ್ತಾಯಗಳು ಸಾಹಿತ್ಯದ ಮುಖ್ಯ ಕಾಳಜಿಯಾಗಿ ಕಾಣಿಸಿಕೊಂಡಿರುವುದನ್ನು ಕಾಣಬಹುದು. ತನ್ನ ಕಾಲ ಸಂದರ್ಭದ ಸಾಮಾಜಿಕ ಸ್ಥಿತ್ಯಂತರಗಳಿಗೆ ಕಾರಣವಾದ ಬರಹಗಾರನ ಸಾಮಾಜಿಕ ಚಿಂತನೆಗಳು ಅವನ ಕೃತಿಗಳಲ್ಲಿ ಕಾಣಿಸಿಕೊಳ್ಳಲು ಸಾಧ್ಯ. ಸಾಶಿಮರವರ ಚಿಂತನೆಗಳು ಕೃತಿ ರೂಪದಲ್ಲಿ ಮೂಡಿದ್ದು ಮುಖ್ಯವಾಗಿ ಪೂರಕವಾದ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಕಾರಣಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಆಯಾ ಕಾಲದ ಸಂದರ್ಭದ ಪ್ರೇರಣೆ ಪ್ರಭಾವ, ಜೀವನ ಗ್ರಹಿಕೆ, ನಂಬಿಕೆ, ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳು ಅಭಿವ್ಯಕ್ತಿಯು ಸಾಧ್ಯತೆಗಳನ್ನು ನಿರ್ಧರಿಸುತ್ತಾ ಬಂದಿದೆ.

ಸಾ.ಶಿ.ಮರುಳಯ್ಯನವರ ಕೃತಿಗಳಲ್ಲಿ ನಿಸರ್ಗ ಪ್ರೇಮ, ಆಧ್ಯಾತ್ಮ ಸಾಮಾಜಿಕ, ರಾಜಕೀಯ ಚಿಂತನೆ ಮುಂತಾದ ವಿಷಯಗಳು ಅನಾವರಣಗೊಂಡಿವೆ. ಜೊತೆಗೆ ಆಗಿನ ಸ್ವಾತಂತ್ರ್ಯದ ಹಂಬಲ ಇವರ ಬರಹದ ವಸ್ತುವಾಯಿತು. ಗಾಂಧಿಜೀಯವರ ತತ್ವ ವಿಚಾರಗಳು ಜನ ಜಾಗೃತಿಗಾಗಿ ದೇಶಪ್ರೇಮ ನಾಡುನುಡಿಯ ಬಗ್ಗೆ ಅಭಿಮಾನ ಮೂಡಿಸುವಂತಹ ವಿಚಾರಪರ ಅಂಶಗಳು ಸೇರಿ ಇವರ ಸಾಹಿತ್ಯ ರಚನೆಗೊಂಡಿದೆ. ಈ ಸಾಲಿಗೆ ಸೇರುವ ಕವಿ ಸಾ. ಶಿ. ಮರುಳಯ್ಯನವರ ಕೃತಿಗಳ ವಸ್ತು ಮತ್ತು ವಿಚಾರಗಳು ವಿಭಿನ್ನವಾದವು ಅವುಗಳನ್ನು ಕುರಿತ ಈ ಅಧ್ಯಯನ ಕುತೂಹಲಕಾರಿಯಾದಾಗಿದೆ.

ಸಾ. ಶಿ. ಮರುಳಯ್ಯನವರ ಸಾಹಿತ್ಯದಲ್ಲಿ ವೈಚಾರಿಕೆಯ ಅಂಶಗಳನ್ನು ಮುಖ್ಯವಾಗಿಟ್ಟುಕೊಂಡು ಈ ಅಧ್ಯಯನವನ್ನು ನಡೆಸಲಾಗಿದೆ, ಅವುಗಳು ಹಲವಾರು, ಧಾರ್ಮಿಕ, ಸಾಮಾಜಿಕ, ರಾಜಕೀಯ ಆಶಯಗಳನ್ನು ಧ್ವನಿಸುತ್ತವೆ.

ಸಮಾಜದಲ್ಲಿನ ಶೋಷಣೆಯನ್ನು ಹೋಗಲಾಡಿಸಲು ಹಲವಾರು ಮಹನೀಯರು ಅವಿರತವಾಗಿ ಪ್ರಯತ್ನಿಸಿದ್ದಾರೆ. ಸಮಾಜದಲ್ಲಿನ ಶೋಷಣೆಯನ್ನು ಕಿತ್ತೊಗೆಯಲು ಜನತೆಯ ಮನೋಧರ್ಮ ಹಾಗೂ ಹೊಸಬಗೆಯ ಆಲೋಚನಾ ಕ್ರಮಗಳು ಮುಖ್ಯವಾಗುತ್ತವೆ. ಹಾಗೂ ವೈಚಾರಿಕತೆಯು ಮನುಷ್ಯನ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾದುದಾಗಿದೆ. ಇವುಗಳನ್ನು ಸಾ.ಶಿ.ಮ ಅವರು ನೃತ್ಯರೂಪಕ ಪ್ರಕಾರದಲ್ಲಿ ಚಿತ್ರಿಸಿದ್ದಾರೆ.

ಸಮಾಜದಲ್ಲಿ ವೈಚಾರಿಕತೆ ಎಂಬುದು ಸಕಲರಿಗೂ ಪ್ರೇರಕ ಶಕ್ತಿಯಾಗಿದೆ, ಅದನ್ನು ತಮ್ಮ ಜೀವನದಲ್ಲಿ ನಿರಂತರವಾಗಿ ಮೈಗೂಡಿಸಿಕೊಂಡು ಸ್ವಾಭಿಮಾನವನ್ನು ಕಳೆದುಕೊಳ್ಳದೆ ನಿಷ್ಠೆ, ಪ್ರಾಮಾಣಿಕತೆಯನ್ನು ರೂಢಿಸಿಕೊಂಡವರು ಸಾ.ಶಿ.ಮರವರು. ಇವರು ಹಿರಿಯ–ಕಿರಿಯರೆನ್ನದೆ ಬಡವ ಬಲ್ಲಿದರಲ್ಲಿ ಒಂದಾಗಿ ಬೆರೆಯುವ ಮಾನವತಾವಾದಿ ವೈಚಾರಿಕ ನಿಲುವಿನ ಶಿಕ್ಷಕರಾಗಿದ್ದರು. ತಮ್ಮ ಜೀವನದುದ್ದಕ್ಕೂ ಇಲ್ಲಿನ ಶೈಕ್ಷಣಿಕ ಸಾಹಿತ್ಯಕ ಸಾಂಸ್ಕೃತಿಕ ಸಂಘ ಸಂಸ್ಥೆಗಳಲ್ಲಿ ಸಂಘಟನೆಗಳಲ್ಲಿ ಯುವ ಪೀಳಿಗೆಯ ಚೈತನ್ಯದ ಚಿಲುಮೆಯಾಗಿ ದುಡಿದವರು.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ವೈಚಾರಿಕ ಸಾಹಿತ್ಯವು ತನ್ನದೇ ಆದ ಛಾಪನ್ನು ಹೊಂದಿದೆ. ಸ್ವಾತಂತ್ರ್ಯೋತ್ತರದಲ್ಲಿ ವಿಫುಲವಾಗಿ ಬೆಳೆದಿದ್ದು, ತನ್ನದೇ ಆದ ಪ್ರಾಮುಖ್ಯತೆಯನ್ನು ಹೊಂದಿದೆ.

ಸಾ. ಶಿ. ಮರುಳಯ್ಯನವರ ವಿಚಾರಧಾರೆಗಳು ಹಳೆಯದರ ಆಧಾರದ ಮೇಲೆ ಹೊಸತನ್ನು ನಿರ್ಮಿಸುವ ವಿಶಾಲ ಹೃದಯಗಳ ಅಗತ್ಯತೆಯನ್ನು ಒತ್ತಿ ಹೇಳುತ್ತವೆ. ಸಮಾನತೆಯ ಅಂಶಗಳನ್ನು ಸಾಧಿಸಲು ವಿಚಾರ ಸ್ವಾತಂತ್ರ್ಯ ಬೆಳೆಯಬೇಕಾಗಿದೆ.

ಸಾಮಾಜಿಕ ಸಂಘರ್ಷಕ್ಕೆ ಪ್ರಮುಖ ಕಾರಣವಾದ ಜಾತಿ ಮತ–ಧರ್ಮ, ಮೇಲ್ವರ್ಗ–ಕೆಳವರ್ಗ ಮುಂತಾದವುಗಳು ಕಾರಣವಾಗಿದೆ. ಜಾತಿ–ಜಾತಿಗಳ ನಡುವಿನ ಕಚ್ಚಾಟ ಬಡಿದಾಟಗಳು ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡಿವೆ. ದೇವರು–ಧರ್ಮಗಳ ಹೆಸರಿನಲ್ಲಿ ಮತ–ಮೌಢ್ಯಗಳ ಅಂಧಕಾರದಲ್ಲಿ ಅನ್ಯಾಯಗಳನ್ನು ತೋರ್ಪಡಿಸುವ ಜೊತೆಗೆ ಆಡಂಬರದ ಪೂಜೆ ವಿಧಾನಗಳು ಅತಿಯಾದ ನಂಬಿಕೆ ಅವಲಂಬನೆಯ ಅವಶ್ಯಕತೆಯಿಲ್ಲ ಹಾಗೂ ನಿರ್ಮಲವಾದ ಶ್ರದ್ಧೆ ಭಕ್ತಿ ಮತ್ತು ಕಾಯದಿಂದಲೇ ದೇವರನ್ನು ಕಾಣಬಹುದೆಂಬ ಸತ್ಯಾಂಶವನ್ನು ಇವರ ಕೃತಿಗಳಲ್ಲಿ ಕಾಣಬಹುದು.

ಇವರ ಕೆಲವು ಕೃತಿಗಳಲ್ಲಿ ಐತಿಹಾಸಿಕ ವಸ್ತು ಒಳಗೊಂಡಿದ್ದು ಬಸವಣ್ಣನೆಂಬ ನೇತಾರ ವಿಚಾರಧಾರೆಗಳನ್ನು ಜಗತ್ತಿಗೆ ಪುನರ್‌ಮನನವಾಗುವಂತೆ ಹಿಡಿದಿದ್ದಾರೆ, ಇವರ ವ್ಯಕ್ತಿತ್ವದ ಮೇಲೆ ಹಲವಾರು ಚಿಂತಕರ ಪ್ರಭಾವ ಮತ್ತು ಪ್ರೇರಣೆಗಳು ವೈಚಾರಿಕತೆಯನ್ನು ರೂಪಿಸಿಕೊಳ್ಳಲು ಸಹಕಾರಿಯಾಗಿದ್ದು ಬುದ್ಧ, ಬಸವ, ಗಾಂಧಿ, ವಿವೇಕಾನಂದ ಮುಂತಾದವರ. ತತ್ವಗಳನ್ನು ತಮ್ಮ ಸಾಹಿತ್ಯ ರಚನೆಯಲ್ಲಿ ಬಳಸಿಕೊಂಡಿದ್ದಾರೆ. ಸಾ. ಶಿ. ಮರವರು ಅನ್ಯಾಯ, ಅಕ್ರಮ ಶೋಷಣೆಯ ವಿರುದ್ಧ ಪ್ರತಿಭಟಿಸಲು ಯುವ

ಜನತೆಗೆ ಕರೆ ನೀಡುತ್ತಾರೆ, ಪ್ರಸ್ತುತದಲ್ಲಿನ ಅನಿಷ್ಟ ಅಸಮಾನತೆಯನ್ನು ಅಳಿಸಿ ಸರ್ವಸಮಾನತೆಯನ್ನು ನೀಡುವುದಾಗಿದೆ. ಶ್ರೀಮಂತರ ದಬ್ಬಾಳಿಕೆಯಿಂದ ಶೋಷಿತರನ್ನು ಬಿಡುಗಡೆಗೊಳಿಸುವ ಮಾಲಕ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಬೌದ್ಧಿಕವಾಗಿ ಸಶಕ್ತರನಾಗಿ ಮಾಡಬೇಕೆಂಬ ಹಂಬಲವಿದೆ. ವರ್ಗ-ವರ್ಣ, ಉಳ್ಳವರು ಮತ್ತು ಇಲ್ಲದವರ ನಡುವೆ ನಡೆಯುತ್ತಿರುವ ಸಂಘರ್ಷದಿಂದ ಶೋಷಣೆಗೊಳಗಾದವರಿಗೆ ಆತ್ಮಸ್ಥೈರ್ಯವನ್ನು ಒದಗಿಸುವ ಧೀಶಕ್ತಿಯನ್ನು ನೀಡುವಂತ ವೈಚಾರಿಕ ಅಂಶಗಳನ್ನು ತೋರಿಸಿಕೊಟ್ಟಿದ್ದಾರೆ.

ಪ್ರತಿಯೊಬ್ಬರ ಜೀವನವು ಅತ್ಯಮೂಲ್ಯವಾದದ್ದು. ಹಾಗಾಗಿ ಜೀವನ ಪ್ರೀತಿಯನ್ನು ನಾವು ಗಳಿಸಬೇಕು ಅದಕ್ಕೆ ಮನುಷ್ಯನಲ್ಲಿ ತಾಳ್ಮೆ, ಸಹನೆ, ಪ್ರೀತಿ, ಶ್ರದ್ಧೆ ಅತ್ಯಗತ್ಯ. ಆಗ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಧೈರ್ಯಗುಂದದೆ ಹಿಮ್ಮೆಟ್ಟಿಸಲು ಸಾಧ್ಯವಾಗುತ್ತದೆ ಎಂಬ ಅಂಶವನ್ನು ವ್ಯಕ್ತಪಡಿಸಿದ್ದಾರೆ. ಮನುಷ್ಯ ಜೀವನದಲ್ಲಿ ಎದುರಾಗುವ ಕಷ್ಟಗಳನ್ನು ಪರಿಹರಿಸಿಕೊಳ್ಳುವ ಸಲುವಾಗಿ ಭಕ್ತಿಮಾರ್ಗವನ್ನು ಹಿಡಿಯುತ್ತಾರೆ ಇದು ಪೂರ್ಣ ಪರಿಹಾರವಲ್ಲದಿದ್ದರೂ ಸಮಾಧಾನದ ಸಂಕೇತವಾಗಿ ಭಕ್ತ, ಧಾನ, ದಾಸೋಹ ಭಾವನೆಗಳು ಮನುಷ್ಯನಲ್ಲಿ ಮೂಡಿ ಸಮಾನತೆಯ ಆಶಯವನ್ನು ಕಾರ್ಯಗತಗೊಳಿಸಲು ಅನುವಾಗುತ್ತದೆ. ಎಂಬುದನ್ನು ಮಾಹಾಪ್ರಸಾದಿ ಕಾದಂಬರಿಯ ಮೂಲಕ ಬಿಂಭಿಸಿದ್ದಾರೆ. ಭಕ್ತಿಯೆಂಬ ಕಪಟ ವೇಷವನ್ನು ಧರಿಸುವ ಕಪಟ ಭಕ್ತರ ಡಾಂಭಿಕತೆಯನ್ನು, ದೇವರ ಹೆಸರಿನಲ್ಲಿ ಶ್ರೀಸಾಮಾನ್ಯನನ್ನು ಶೋಷಿಸುವ ಪೂಜಾರಿಗಳ ಬಗೆಗೆ ಮತ ಮೌಢ್ಯವನ್ನು ಭಿತ್ತುವವರ ಬಗೆಗೆ ತಿರಸ್ಕಾರವಿದೆ ಹಾಗೂ ನಿಜವಾದ ಭಕ್ತಿಯು ವೈಯಕ್ತಿಕವಾಗಿದ್ದು, ತಾವು ಮಾಡುವ ಕಾಯಕದ ಮೂಲಕ ಪಡೆಯಬೇಕು ಎಂದು ಸೂಚಿಸಿದ್ದಾರೆ.

ನಮ್ಮ ಸಮಾಜದಲ್ಲಿ ಹೆಣ್ಣಿಗೆ ಪ್ರತ್ಯೇಕವಾದ ಸ್ಥಾನಮಾನಗಳಿವೆ. ಆದರೆ ಅವು ಅವರ ಬದುಕಿಗೆ ಪೂರಕವಾಗಿರದೆ ಮಾರಕವಾಗಿವೆ. ಹೇಗೆಂದರೆ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ವರ್ಣ ವ್ಯವಸ್ಥೆ, ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆಯ ಸಂಬಂಧದ ಹಳೆಯ ಕಟ್ಟುಕಟ್ಟಳೆಗಳನ್ನು ಸ್ವಾತಂತ್ರ್ಯೋತ್ತರದ ದಿನಗಳಲ್ಲಿ ಸಹ ಶ್ರದ್ಧಾಪೂರ್ವಕವಾಗಿ ಅನುಸರಿಸುತ್ತಿರುವ ಜನರಲ್ಲಿ ಹೊಣೆಗೇಡಿ ರೋಗಿಷ್ಟ ಮನಸ್ಸಿನವರು, ಜೂಜುಕೋರರು, ಕಳ್ಳ ಕಾಕರು, ಹೊಸ ಶಿಕ್ಷಣದ ವಿವೇಕ ಪಡೆದ ತರುಣರು, ಅಸ್ಪೃಶ್ಯತೆ ಆಚರಣೆ, ಜಾತಿ ಕಟ್ಟಳೆಗಳನ್ನು ಮೀರಿ ಬೆಳೆಯುವ ಹೀಗೆ ಬದುಕಿನ ಸಂಗತಿಗಳು ಕಂಡುಬರುತ್ತವೆ. ಭಾವುಕತೆಯ ತೀವ್ರವಾದ ತುಡಿತಗಳ ನಡುವೆಯೂ ಗಂಡು ಹೆಣ್ಣಿನ ಆತ್ಮೀಯತೆಯ ಪವಿತ್ರ ಮೌಲ್ಯಗಳ ಬಗೆಗೆ ಅಪಾರವಾದ ಕಾಳಜಿಯು ಲೇಖಕರ ಮೂಲ ದ್ರವ್ಯವಾಗಿದೆ. ಆದ್ದರಿಂದಲೇ ಇವರ ಕೃತಿಗಳು ಚಿಂತನೆಯನ್ನು ಬಿಂಬಿಸುತ್ತವೆ. ಸಮಕಾಲೀನ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಬರೆಯುವಾಗ ಅವುಗಳ ತಾತ್ಕಾಲಿಕ ತೀವ್ರತೆಯಲ್ಲಿ ಆ ಸಮಸ್ಯೆಗಳ ಹಿಂದಿರುವ ಸರ್ವಕಾಲೀನ ವಿನ್ಯಾಸವನ್ನು ಗುರುತಿಸಿರುವುದು ಅತಿ ಮುಖ್ಯವಾದುದು. ಈ ದೃಷ್ಟಿಯಿಂದ ಸಾಮಾಜಿಕ ಪ್ರಜ್ಞೆಯ ಸರ್ವಕಾಲೀನ ಹೊಸ ಸಾಧ್ಯತೆಗಳನ್ನು ಅನ್ವೇಷಿಸುವ ಪ್ರಯತ್ನವಾಗಿ ಕೂಡ ಗಮನಾರ್ಹವಾದ ಸಾಧನೆಯಾಗಿದೆ. ಸದ್ಯದ ಸಾಮಾಜಿಕ, ರಾಜಕೀಯ ವ್ಯವಸ್ಥೆಯ ಸೋಗಲಾಡಿತನವನ್ನು ಹಾಗೂ ಅದರ ಕ್ಷುದ್ರತೆಯನ್ನು ವಿಡಂಬಿಸುವುದಲ್ಲದೆ ಅದರಾಚೆಗಿನ ದಟ್ಟವಾದ ಆಶಾವಾದದ ಕಡೆಗೂ ಮೈ ಚಾಚಿಕೊಳ್ಳುತ್ತದೆ. ಪ್ರತಿಯೊಬ್ಬನ ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಳ್ಳುವ ಎಳೆಯನ್ನು ಸೂಕ್ಷ್ಮವಾಗಿ ಬಯಲು ಮಾಡುವ ಬದ್ಧತೆಯುಳ್ಳ ತಾನು ಜನಪರನೆಂದು ಘೋಷಿಸಿಕೊಂಡಿರುವ ಆದರೆ ಮೌಲ್ಯಗಳ ಬಗ್ಗೆ ಅಷ್ಟಾಗಿ ಕಾಳಜಿ ಇಲ್ಲದ ಅಸೂಯೆ ಮತ್ತು ಸಣ್ಣತನಗಳು ನಿರೂಪಕನ ತರ್ಕಬದ್ಧವಾದ ಮಾತುಗಳ ಮೂಲಕ ಮೌಲ್ಯಗಳ ಬಗೆಗೆ ಬದ್ಧತೆ ಇರುವ ವ್ಯಕ್ತಿಗಳನ್ನು ತನ್ನ ಪರವಾಗಿ ಸೆಳೆದುಕೊಳ್ಳಲು ಅಮಾನವೀಯವಾಗಿ ನಿಂದಿಸುವ ನಮ್ಮ ಭ್ರಷ್ಟಗೊಂಡಿರುವ ರಾಜಕೀಯ ವ್ಯವಸ್ಥೆಯ ನೈತಿಕ ಅಧಃಪತನವನ್ನು ಸಂಕೇತಿಸುತ್ತವೆ.

ಶೋಷಕ ಸಮಾಜವನ್ನು ನಾಶ ಪಡಿಸುವುದು ಮತ್ತು ಶೋಷಿತರನ್ನು ಶೋಷಣಾ ಮುಕ್ತವನ್ನಾಗಿಸುವುದು ಈ ವೈಚಾರಿಕತೆಯು ಸಮಾಜಮುಖಿ ಚಿಂತನೆಯ ಜೊತೆಗೆ ಮಾನವೀಯ ನೆಲೆಗಳನ್ನು ಗುರುತಿಸುವುದು ಮತ್ತು ಆ ಮೂಲಕ ಸಮತಾ ಸಮಾಜವನ್ನು ಸ್ಥಾಪಿಸುವುದೇ ಇಲ್ಲಿರುವ ಮುಖ್ಯ ಧ್ಯೇಯವಾಗಿದೆ. ಭಾರತೀಯ ಸಂಪ್ರದಾಯದಲ್ಲಿ ಹೆಣ್ಣನ್ನು ದೇವತೆಯನ್ನಾಗಿ ಕಾಣಲಾಗದಿದ್ದರೂ ಕೂಡ ನಾಲ್ಕು ಗೋಡೆಗಳ ಮಧ್ಯೆ ಬಿಟ್ಟು ಹೆಣ್ಣಿನ ಸ್ವಾತಂತ್ರ್ಯ ಹರಣವನ್ನು ಮಾಡಲಾಗಿರುವುದು. ಹೆಣ್ಣಿನ ಶೀಲವಂತಿಕೆಯನ್ನು ಪರಹಿತಕ್ಕಾಗಿ ಸುಟ್ಟುಕೊಳ್ಳುವ ಕ್ರಿಯೆ ಸಮಾಜದ ಘೋರ ದುರಂತವಾಗಿದೆ ಯಾಕೆಂದರೆ ಸಾಮಾನ್ಯವಾಗಿ ಭಾರತೀಯ ಸ್ತ್ರೀ ಸಂಕುಲ ಪಾತಿವ್ರತ್ಯದ ಮೇಲೆ ಹೊಲಸನ್ನು ಹೊತ್ತುಕೊಂಡ ಸುಶೀಲ ಗುಣವನ್ನು ಹೊಂದಿದೆ. ಇಲ್ಲಿ ಘರ್ಷಣೆ ಇರುವುದು ಸಹಜ. ಭಾರತೀಯ ಸಾಂಪ್ರದಾಯಿಕ ಜೀವನದಿಂದ ಬೇಸತ್ತು ಅದರಿಂದ ವಿಮುಖನಾಗಿ ಮುಕ್ತನಾಗಿ ಹೋದ ಸಮಾಜದ ರಚನೆಯ ಹುಮ್ಮಸ್ಸಿನಲ್ಲಿರುವ ಲೇಖಕರು ಕಂಡುಬರುತ್ತಾರೆ. ಯಾಕೆಂದರೆ ಇಲ್ಲಿಯ ಸನಾತನ ಸಂಸ್ಕೃತಿಯ ಬಿಗಿ ಬಂಧನ ಅಲ್ಲದೆ ಅಸಮಾನತೆಯ ಬೀಡಾಗಿರುವ ಭಾರತದ ಸಾಂಸ್ಕೃತಿಕ ಪರಿಸರವನ್ನು ಸಮಾಜದಲ್ಲಿ ಬದಲಾವಣೆ ತರುವ ಅಥವಾ ಬದಲಾವಣೆ ಬಯಸುವಂತಹ ನಿಜವಾದ ಸಾಮಾಜಿಕ ಬದ್ಧತೆಯನ್ನು ಇಟ್ಟುಕೊಂಡು ರಚಿತವಾಗಿದೆ. ಅಸಮಾನತೆಯನ್ನು ಕಂಡು ಸಿಡಿದೇಳುವ ಕವಿ ಸಮಾಜಕ್ಕೆ ಪ್ರಶ್ನೆ ಹಾಕುವುದನ್ನು ಜಾತಿ ಮತ್ತು ವರ್ಗ ತಾರತಮ್ಯದಲ್ಲಿ ಹಿಂಡಿ ಹತ್ಯೆಯಾಗಿರುವ ಮಾನವನ ಜೀವನವನನ್ನು ಚಿತ್ರಿಸಿರುವುದು ಇಲ್ಲಿಯ ಮುಖ್ಯ ಅಂಶಗಳಲ್ಲಿ ಒಂದಾಗಿದೆ. ನಮ್ಮ ಹೋರಾಟ ಪ್ರಧಾನವಾಗಿ ಸಾಂಸ್ಕೃತಿಕ ಕ್ಷೇತ್ರಕ್ಕೆ ಸಂಬಂಧಿಸಿದ್ದು ದೇಶದ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳು ಪರಸ್ಪರ ಸಂಬಂಧವುಳ್ಳ ಎಂಬ ನಿಲುವಿನಿಂದ ಹೊರಟಿದ್ದು ಸಾಹಿತಿಗೆ ರಾಜಕೀಯ ಮತ್ತು ಸಾಮಾಜಿಕ ಪ್ರಜ್ಞೆ ಇರಬೇಕೆಂಬ ಆಶಯ. ಇಲ್ಲಿ ಮುಖ್ಯವಾದದ್ದು ಅಸ್ಪೃಶ್ಯತೆ ಜಾತಿ ಪದ್ಧತಿ ಲಿಂಗಭೇದ ಮತ್ತು ವರ್ಗ ಭೇದ ನೀತಿಯ ವಿರುದ್ಧ ಹೋರಾಟವನ್ನು ಕಟ್ಟುವುದು ನಮ್ಮ ಮುಖ್ಯ ಉದ್ದೇಶಗಳಲ್ಲಿ ಒಂದು ಎಲ್ಲ ಜನಪರ ನಿಲುವುಗಳಿಗೆ ನಮ್ಮ ಬೆಂಬಲ ಜನಪರವಾದ ಸಾಂಸ್ಕೃತಿಕ ಹೋರಾಟ ನಮ್ಮ ಮುಖ್ಯ ನೆಲೆ ಇಂಥ ಒಲವಿನ ಸಾಹಿತ್ಯ ಸೃಷ್ಟಿ ನಮ್ಮ ಹೋರಾಟದ ಮುಖ್ಯ ದಾಖಲೆ ಯಾಗಬೇಕು ಎಂಬುದು ಲೇಖಕರ ನಿಲುವಾಗಿದೆ.

ಅನ್ನದ ಸಮಸ್ಯೆಯಿಂದ ಪರಿತಪಿಸುವ ಜನ ಸಮುದಾಯಗಳು ಇನ್ನೂ ಕತ್ತಲು ಜಗತ್ತಿನಿಂದ ಹೊರಬರಲು ಸಾಧ್ಯವಾಗಿಲ್ಲ ಅದೇ ದಾರಿದ್ರ್ಯದ ಹಸಿವಿನ ಅಸಮಾನ ಬದುಕುಗಳು ಇನ್ನೂ ನಮ್ಮವಾಗಿರುವಾಗ ಶತಮಾನ ಕಳೆದರೂ ದೇವರ ಹೆಸರಿನಲ್ಲಿ ನಡೆಯುತ್ತಿರುವ ಮೋಸ ವಂಚನೆಗಳನ್ನು ಅರ್ಥ ಮಾಡಿಕೊಳ್ಳಲು ಇನ್ನು ಸಾಧ್ಯವೇ ಆಗಿಲ್ಲ. ಈ ಬಗೆಯ ದೇವರು ಧರ್ಮಗಳಿಗಿಂತ ನಮ್ಮ ಬದುಕನ್ನು ಕಟ್ಟಿಕೊಳ್ಳುವುದು ಅತಿ ಜರೂರಿನ ಕೆಲಸವಾಗಿದೆ. "ನಮ್ಮ ದೇಶದಲ್ಲಿ ತಾಂತ್ರಿಕ ಪ್ರಜಾಪ್ರಭುತ್ವವಿದೆ ಭ್ರಮಾತ್ಮಕ ಸ್ವಾತಂತ್ರ್ಯವಿದೆ. ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯದ ಕಲ್ಪನೆಗಳು ಇಲ್ಲಿ ಯಾರ ಹಿತಾಸಕ್ತಿಗಳಿಗೆ ಅನುಗುಣವಾಗಿ ರೂಪುಗೊಂಡಿವೆ. ಎಂಬುದನ್ನು ಗಮನಿಸುವುದು ತೀರಾ ಅಗತ್ಯ ಏಕೆಂದರೆ ಅಸಮಾನತೆ ತುಂಬಿ ತುಳುಕುತ್ತಿರುವ ಈ ಭವ್ಯ ಭಾರತದಲ್ಲಿ

ನಿಷ್ಪಕ್ಷಪಾತ ಪರಿಕಲ್ಪನೆಯನ್ನು ಕಲ್ಪಿಸಿಕೊಳ್ಳುವುದು ಹೇಗೆ ಸಾಧ್ಯ. ಸ್ವಾತಂತ್ರ್ಯ ಮತ್ತು ಹಕ್ಕುಗಳನ್ನು ಕಾಗದದ ಮೇಲೆ ಘೋಷಿಸುವುದು ಮುಖ್ಯವಲ್ಲ ದೇಶದ ಕಟ್ಟಕಡೆಯ ಮನುಷ್ಯನು ಅವನು ಅನುಭವಿಸುವಂತಹ ಸ್ಥಿತಿ ನಿರ್ಮಾಣ ಮಾಡುವುದು ಮುಖ್ಯ. ಎಂಬುದು ಲೇಖಕರ ಆಶಯವಾಗಿದೆ.

ಹೀಗೆ ಶೋಷಿತ ವರ್ಗ ತೊಂದರೆಯಿಂದ ತಪ್ಪಿಸಿಕೊಳ್ಳುತ್ತದೆ. ಅಂದಿನ ಸಾಮಾಜಿಕ ಜೀವನದಲ್ಲಿ ಬೇರುಬಿಟ್ಟ ನಂಬಿಕೆ ಅಳಿಸಲು ವಿಚಾರ ಅರ್ಥಹೀನ ಆಚರಣೆ ಮೌಢ್ಯತೆಯ ಕುರುಡು ರೀತಿ ನೀತಿಗಳನ್ನು ಬಯಲಿಗೆಳೆಯುತ್ತಾರೆ. ಮನುಷ್ಯನ ಜೀವನದಲ್ಲಿ ಅನೇಕ ಕಷ್ಟಗಳು ಬರುತ್ತವೆ ಆದರೆ ಈ ಕಷ್ಟಗಳಿಗೆ ದೇವರು ಕಾರಣವಲ್ಲ ಎಂದು ಕವಿ ಮೌಢ್ಯತೆಯ ವಿರುದ್ಧ ಧ್ವನಿ ಎತ್ತಿದ್ದಾರೆ ಮಾನವ ಮೌಢ್ಯತೆಯನ್ನು ಕಳಚಿ ಹಾಕಿ ಹೊಸ ದಾರಿಯನ್ನು ತುಳಿಯಬೇಕು ಆ ಹೊಸ ದಾರಿಯನ್ನು ಲೇಖಕರು ತಿಳಿಸಿದ್ದಾರೆ. ಶಿವಶರಣರ ಸಂಸ್ಕೃತಿಯಲ್ಲಿ ಅಪಾರವಾದ ವಿಶ್ವಾಸವಿಟ್ಟು ಶಿವಶರಣರ ಮಾನವೀಯ ಮೌಲ್ಯಗಳಿಗೆ ಮಾರು ಹೋಗಿ ಸಮಾಜವಾದದ ಆಶಾವಾದಿತ್ವವನ್ನು ಇವರು ದುರ್ಬಲ ಶೋಷಿತ ಶೋಷಕ ಜನಾಂಗದ ನಡುವಿನ ಮಾನವೀಯ ವಾತಾವರಣವನ್ನು ಸಾಮಾಜಿಕ ಧಾರ್ಮಿಕ ರಾಜಕೀಯ ಸಾಂಸ್ಕೃತಿಕ ಅಸಮಾನತೆಯನ್ನು ತಮ್ಮ ಕೃತಿಗಳಲ್ಲಿ ವಸ್ತುವಾಗಿಸಿಕೊಂಡು ರಚಿಸಿದ್ದಾರೆ

ಜೀವನದಲ್ಲಿ ಒಲವಿನ ಆದರ್ಶವೊಂದು ಬಿಚ್ಚಿಕೊಳ್ಳುವ ಪರಿ ಅದ್ಭುತವಾದದ್ದು ಪ್ರೀತಿ ಮತ್ತು ಬಡತನ ಇಲ್ಲಿ ಮುಖ್ಯವಾಗಿ ಬಂದ ಅಂಶಗಳಾಗಿವೆ. ದಾಂಪತ್ಯ ಒಲವು ನಿರಂತರವಾಗಿದ್ದರೆ ಸಾಕು ಅದಕ್ಕೆ ಬಡತನದ ಬಿಸಿ ತಾಗಲು ಸಾಧ್ಯವಿಲ್ಲ ಎಂಬ ಜೀವನ ಮೌಲ್ಯವನ್ನು ಪ್ರತಿಪಾದಿಸಿದ್ದಾರೆ ಆಧ್ಯಾತ್ಮಿಕತೆ ದೇಶಪ್ರೇಮ, ಭಾಷಾ ಪ್ರೇಮ, ನಿಸರ್ಗ ವರ್ಣನೆ, ಬಡತನ ಸಾಮಾಜಿಕ ಅನಿಷ್ಟಗಳು ಮುಂತಾದ ವಸ್ತುಗಳು ಸಾಶಿಮ ಅವರ ಕೃತಿಗಳಲ್ಲಿ ಮೂಡಿ ಬಂದಿದ್ದು ಕೂಡ ಅಲ್ಲೊಂದು ಬದಲಾವಣೆಯ ಧ್ವನಿ ಕಾಣಿಸಿಕೊಳ್ಳುತ್ತದೆ. ಸಾಮಾಜಿಕ ಬದಲಾವಣೆಯೇ ಅವರ ಮುಖ್ಯ ಗುರಿ ಆಗಿರುವಂತೆ ಕಾಣುತ್ತದೆ ಅವರ ಆಶಯಗಳು ಮಾನವೀಯ ಮೌಲ್ಯಗಳನ್ನು ಸ್ಪಷ್ಟಪಡಿಸುತ್ತವೆ. ಅನ್ನದ ಸಮಸ್ಯೆಯ ಬಗ್ಗೆ ಮಿಡಿಯುವ ಕವಿ ಹೃದಯ ವಸ್ತುವಿನ ಅನುಭವ ಮತ್ತು ಅಭಿವ್ಯಕ್ತಿಗಳಲ್ಲಿ ತೋರಿದ ಧೋರಣೆ ಅವರ ಸಾಮಾಜಿಕ ಚಿಂತನೆಗೆ ನಿದರ್ಶನವಾಗುತ್ತದೆ ಎಂಬ ಅಂಶಗಳು ಈ ದೇಶದ ವಾಸ್ತವದ ಅರಿವನ್ನು ಉಂಟು ಮಾಡುತ್ತವೆ.

ಸಂಪತ್ಭರಿತ ಭಾರತ ದೇಶದಲ್ಲಿ ದೇಶದ ಬಹುಪಾಲು ಜನರಿಗೆ ತಿನ್ನಲು ಅನ್ನ ಏಕೆ ಸಿಗುತ್ತಿಲ್ಲ ಎಂಬುದು ಸಾಶಿಮರವರ ಮೂಲಭೂತ ಪ್ರಶ್ನೆ ಅದರ ಹಿಂದಿರಬಹುದಾದ ಕಾರಣವನ್ನು ಅರಿಯುವ ಪ್ರಯತ್ನ ನಾವು ಮಾಡುತ್ತಿಲ್ಲ ಎಂಬ ಬಗ್ಗೆ ಅವರು ಬೇಸರ ವ್ಯಕ್ತಪಡಿಸುತ್ತಾರೆ. “ಭಾರತದಂಥ ದೇಶದಲ್ಲಿ ಜಾತಿ ಸಮಸ್ಯೆಯಿಂದ ವರ್ಗ ಸಮಸ್ಯೆಯೂ ತೀವ್ರವಾಗಿದೆ, ಎಂದು ಗುರುತಿಸುವ ಮೂಲಕ ಉಳ್ಳವರ ಸ್ವಾರ್ಥ ಪರತೆಯಿಂದ ಅಮಾಯಕ ಜನ ನರಳುತ್ತಿದ್ದರೂ ಕೂಡ ಏನಾದರೂ ಸಿಗಬಹುದೆಂಬ ಆಶಯದಿಂದ ಆ ಉಳ್ಳವರ ಸುತ್ತಮುತ್ತಲೇ ಇಲ್ಲದವರ ಗುಂಪು ಸದಾ ಸುತ್ತುತಿರುತ್ತದೆ. ಇದನ್ನು ದುರುಪಯೋಗಪಡಿಸಿಕೊಳ್ಳುವ ಉಳ್ಳವರು ಆ ಅಮಾಯಕ ಜನತೆಯನ್ನು ದುಡಿಸಿಕೊಂಡು ಮೋಸ ಮತ್ತು ಶೋಷಣೆ ಮಾಡುತ್ತಾರೆ

ಇಲ್ಲಿ ಬರುವ ಮಾನವ ಪ್ರೇಮ ಎದೆಗಾರಿಕೆ ಸಾಮಾಜಿಕ ವಿಚಾರ ಸಾಹಿತ್ಯಿಕವಾದ ಸ್ಥೂಲ ಅರ್ಥ ಗಂಭೀರತೆ ವ್ಯಂಗ್ಯ ವಿನೋದಗಳಿಂದಾಗಿ ಇವು ಅದರಲ್ಲಿ ಪರಂಪರಾಗತವಾದ ಜಾತಿಯ ನಿಲುವುಗಳನ್ನು ಒಡೆದು ಹಾಕಿ ವೈಚಾರಿಕತೆಯನ್ನು ತೋರುವ ಅಂಶಗಳು ಪ್ರಾಪ್ತವಾಗುತ್ತವೆ. ಒಟ್ಟಿನಲ್ಲಿ ಇವರ ಚಿಂತನೆಗಳು ಸಾಮಾಜಿಕ ಸಮಸ್ಯೆಗಳ ವಿರುದ್ಧದ ಹೋರಾಟವಾಗಿತ್ತು. ಅಸ್ಪೃಶ್ಯ ಮತ್ತು ದಲಿತರಲ್ಲಿ ಇದ್ದ ಸುತ್ತ ಪ್ರಜ್ಞೆಯನ್ನು ಸಾಮಾಜಿಕ ಮತ್ತು ಸಾರ್ವತ್ರಿಕ ಪ್ರಜ್ಞೆಯನ್ನಾಗಿಸುವಲ್ಲಿ ಇವರಿಗೆ ಪ್ರಾಮುಖ್ಯತೆ ಸಲ್ಲುತ್ತದೆ ಈ ಮೊದಲ ಪ್ರಯತ್ನಗಳು ಶತಮಾನಗಳಿಂದ ಸ್ವಾತಂತ್ರ್ಯ ಹೀನತೆ ಬಂಧನ ಅಭಿವ್ಯಕ್ತಿಯ ಸಂಕೋಲೆಯಲ್ಲಿ ಮುರಿದಿದ್ದ ಕೆಳವರ್ಗದವರನ್ನು ಒಂದು ಹಂತದ ಬಂದ ಮುಕ್ತತೆಯ ಮಾರ್ಗವನ್ನು ತೋರಿಸಿದರು ಎಂದರೆ ತಪ್ಪಾಗಲಾರದು.

ವಿಶಾಲ ಜಗತ್ತಿನಲ್ಲಿ ಆಗುತ್ತಿರುವ ಬದಲಾವಣೆಗಳು ಪ್ರಗತಿಗಳು ಇಲ್ಲಿ ಕಾಣುತ್ತಿಲ್ಲ ಬದಲಿಗೆ ಅದೇ ಹಳೆಯ ಪುರಾಣ ಶಾಸ್ತ್ರ ಕಟ್ಟು ಕಥೆಗಳಿಗೆ ಜನ ಶರಣಾಗಿದ್ದಾರೆ. ಅಜ್ಜ ನೆಟ್ಟ ಆಲಕ್ಕೆ ನೇಣು ಹಾಕಿಕೊಳ್ಳುವ ಜನ ಬದಲಾವಣೆಯೇ ಮಾನವನ ಬದುಕು ಹಸನಾಗಿ ಮನುಷ್ಯ ಸಂಬಂಧ ಗಟ್ಟಿಯಾಗಬೇಕು ಮಾನವೀಯತೆಯ ಸಾಕಾರ ರೂಪ ಪಡೆಯಬೇಕು. ಚಿಕ್ಕ ಮಕ್ಕಳಿರುವಾಗ ಹೆಣ್ಣು ಗಂಡು ಭೇಧವಿಲ್ಲದೆ ಆಡುವ ಆಟ ಕಾಲ ಗತಿಸಿದಂತೆ ಅಂದರೆ ಹುಡುಗ ಗಂಡಸು ಆದಾಗ ಹುಡುಗಿ ಹೆಂಗಸು ಆದಾಗ ಒಂದು ರೀತಿಯ ಅಂತರ ಬೆಳೆದು ಬರುತ್ತದೆ ನಮ್ಮ ದೇಶದಲ್ಲಿ ಅಂತರ ಬೆಳೆಸುವ ಪರಂಪರೆಯೊಂದಿಗೆ ‘ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬೆಳೆದೊಡೆ ಗಂಡೆಂಬರು ನಡುವೆ ಸುಳಿದಾಡುವ ಆತ್ಮ ಹೆಣ್ಣೂ ಅಲ್ಲ ಗಂಡೂ ಅಲ್ಲ’ ಎಂಬ ವೈಚಾರಿಕ ಹಿನ್ನಲೆಯೂ ನಮಗಿದೆ. ಆದರೆ ಇಲ್ಲಿ ಪರಿಗಣಿನೆಗೆ ಬರುವುದೇ ಇಲ್ಲ ಬೆಳೆದ ಗಂಡು ಹೆಣ್ಣು ಕೂಡಿ ನಿಂತರೆ ಅಥವಾ ಕ್ಷಣ ಹೊತ್ತು ಮಾತನಾಡಿದರು ಸಾಕು ಅನುಮಾನ ಪಡುವ ಮತ್ತು ಅಪವಾದ ಹೊರಿಸುವ ಮನಸ್ಸುಗಳು ನಮ್ಮಲ್ಲಿವೆ ಹೀಗಾಗಿಯೇ ಕವಿ ಆಧುನಿಕತೆಯ ಈ ಮಡಿವಂತಿಕೆಯನ್ನು ಸೂಕ್ಷ್ಮವಾಗಿ ಖಂಡಿಸಿದ್ದಾರೆ. ಒಟ್ಟಿನಲ್ಲಿ ಸಮಾಜಪರ ನಿಲವು ಒಲವು ಪ್ರಸ್ತುತದಲ್ಲಿ ಅಗತ್ಯವಾಗಿದ್ದು ಅಜ್ಞಾನ ಅನೀತಿ ಅಮಾನವೀಯ ಮೌಢ್ಯಗಳನ್ನು ಬುಡಮೇಲು ಮಾಡುವ ಮೂಲಕ ಇಂದು ಹೊಸಪೀಳಿಗೆಯ ನವವಸಂತಕ್ಕೆ ಚೇತನವನ್ನು ತುಂಬುವ ಕರ್ತವ್ಯ ನಮ್ಮೆಲ್ಲರದಾಗಿದೆ. ಮನುಷ್ಯನಿಗೆ ಮೂಲಭೂತ ಅಗತ್ಯಗಳು ಪಕ್ಷಪಾತವಿಲ್ಲದೆ ಸಿಗಬೇಕು ಎಲ್ಲರೂ ಸಮಾನತತ್ವದಿಂದ ಬಾಳಬೇಕು. ಅದು ಲೋಕಾನುಭವದಿಂದ ಜೀವಂತವಾಗಿರಬೇಕು, ಸಂಸ್ಕಾರಗೊಂಡಿರಬೇಕು ಸಹೃದಯತೆಯಿರಬೇಕು ಅದೇ ಮಾರ್ಗದಲ್ಲಿ ವಿದ್ವಾಂಸರುಗಳ ವಿಚಾರದಿಂದ ಹೊಸದುಕೊಂಡು ಹೋಗಬೇಕಾಗುತ್ತದೆ. ಆಗ ಹೊಸ ಹೊಸ ವಿಚಾರಗಳನ್ನು ಹೆಕ್ಕಿ ತೆಗೆಯುವ ಮೂಲಕ ವೈಚಾರಿಕತೆಗೆ ಸ್ಪಷ್ಟ ನಿದರ್ಶನ ಒದಗಿಸಬಹುದಾಗಿದೆ. ಈ ವಿಚಾರಗಳು ವೈಚಾರಿಕತೆಗೆ ಸಂಬಂಧಿಸಿದಂತೆ ಸಾ.ಶಿ.ಮರವರು ಕನ್ನಡ ಸಾಹಿತ್ಯದ ಪ್ರಕಾರವಾದ ನೃತ್ಯರೂಪಕಗಳಲ್ಲಿ ವೈಚಾರಿಕತೆಯನ್ನು ಚಿತ್ರಿಸಿದ್ದಾರೆ. ಅವುಗಳನ್ನು ಈ ಕೆಳಗಿನಂತೆ ನಿರೂಪಿಸಬಹುದಾಗಿದೆ.

ಅನಾಗರೀಕ ಮಾನವನಿಗೆ ಭಾಷೆಯ ಸಂಪರ್ಕವಿರಲಿಲ್ಲ. ತನ್ನೆಲ್ಲಾ ಆಸೆ ಆಕಾಂಕ್ಷೆಗಳನ್ನು ಆಂಗಿಕ ಭಾಷೆಯಿಂದಲ್ಲೇ ವ್ಯಕ್ತಪಡಿಸುತ್ತಿದ್ದನು. ಆತ ಪ್ರಾಣಿಗಳಿಗಿಂತ ಹೊರತಾಗಿರಿಲಿಲ್ಲಾ, ಅಂತೆಯೇ ತಮ್ಮ ನೋವು ನಲಿವುಗಳನ್ನು ವ್ಯಕ್ತಪಡಿಸುವ ಕಲೆ ಬೆಳೆಯಿತು. ಇದು ಮಾನವರ ನರ್ತನದ ಉಗಮಕ್ಕೆ ಕಾರಣವೆಂದೇ ಹೇಳಬಹುದು. ಆಧುನಿಕ ಕನ್ನಡ ಸಾಹಿತ್ಯಕ್ಕೆ ಸಾ.ಶಿ. ಮರುಳಯ್ಯನವರು ನೃತ್ಯರೂಪಕ ಎಂಬ ಹೊಸ ಪರಿಕಲ್ಪನೆಯನ್ನು ಪರಿಚಯಿಸಿದ್ದು, ಇಂಗ್ಲೀಷಿನ ಅಪರಾಕ್ಕಿರುವ ಪರ್ಯಾಯ ಕಲೆ ನೃತ್ಯರೂಪಕ. ತಾಂತ್ರೀಕವಾಗಿ ಎರಡು ಭಿನ್ನ. ಇದು ನೃತ್ಯ ಗೀತೆ ಹಾಗೂ ಸಾಹಿತ್ಯದ ಕಲಾಸಂಗಮವಾಗಿದೆ. ಅದು ಮೂಕ ಮೇಳ ಅಲ್ಲಿ ಸಂಗೀತಕ್ಕೆ ಆಂಗಿಕಾಭಿನಯಕ್ಕೆ ಹೆಚ್ಚು ಪ್ರಾಶಸ್ತ್ಯ. ನೃತ್ಯರೂಪಕದಲ್ಲಿ ಸಂಗೀತ, ಸಾಹಿತ್ಯ ಮತ್ತು ಅಭಿನಯಗಳ ಜೊತೆಯಲ್ಲಿ ತನ್ನದೆಯಾದ ವೈವಿಧ್ಯಮಯ ನೃತ್ಯವೂ ಉಂಟು. ಈ ನೃತವೇ ಕಲೆಯ ತಾಯಿ

ಬೇರು ಭಾರತೀಯ ಜಾನಪದ ಕಲೆಗಳಲ್ಲಿದೆ.

ಬಸವಣ್ಣನವರು ಈ ವಿಶ್ವ ಕಂಡ ಮಹಾನ್ ದಾರ್ಶನಿಕ. ಜಗವನ್ನು ಉದ್ಧರಿಸಲು ಬಂದ ಕ್ರಾಂತಿ ಪುರುಷ. ಸಮಾಜ ಸುಧಾರಕರಾಗಿ ಸಮಾಜೋಧ್ಧಾರ್ಮಿಕ ಆಂದೋಲನಕಾರರಾಗಿ, ಭಕ್ತಿ ಭಂಡಾರಿಯಾಗಿ, ಕ್ರಾಂತಿಯೋಗಿಯಾಗಿ, ಆರ್ಥಿಕ ತಜ್ಞರಾಗಿ, ಪರಿಸರ ವಿಜ್ಞಾನಿಯಾಗಿ, ದಲಿತೋದ್ಧಾರಕರಾಗಿ, ಮಾನವೀಯ ಮೌಲ್ಯಗಳ ಪ್ರತಿಪಾದಕರಾಗಿ, ಹೊಸ ಸಮಾಜದ ರೂವಾರಿಯಾಗಿ ಜನಮಾನಸದಲ್ಲಿ ನೆಲೆಸಿದ್ದಾರೆ. ಒಂದು ಕ್ಷೇತ್ರಕ್ಕೆ ಸೀಮಿತವಾಗದೆ ಜೀವನದ ಎಲ್ಲಾ ಕ್ಷೇತ್ರಗಳಿಗೂ ಹೊಸ ತಿರುವನ್ನು ತಂದುಕೊಟ್ಟ ಯುಗಪುರುಷ ಎನಿಸಿದ್ದಾರೆ.

ಹನ್ನೆರಡನೆಯ ಶತಮಾನದ ಈ ವಿಭೂತಿ ಪುರುಷ, ಕ್ರಾಂತಿವೀರ, ಕರ್ನಾಟಕದಲ್ಲಿ ಜನಿಸಿ ನಾಡಿನ ಸಮಕಾಲೀನ ಸಾಮಾಜಿಕ, ಧಾರ್ಮಿಕ ಸಮಸ್ಯೆಗಳಿಗೆ ಮಾತ್ರವಲ್ಲ, ಪುರಾತನ ಜಗತ್ತಿನ ಸಮಸ್ಯೆಗಳಿಗೂ ಶಾಶ್ವತ ಪರಿಹಾರವನ್ನು ಸೂಚಿಸಿದ್ದಾರೆ ವಿನೂತನ ವಿಶ್ವ ಧರ್ಮದ ಅಡಿಪಾಯವೆನ್ನುವಂತೆ ತತ್ವಸಿದ್ಧಾಂತ ಆಚಾರ ವಿಚಾರಗಳನ್ನು ರೂಪಿಸಿದ್ದಾರೆ, ಕ್ರಿಸ್ತ, ಗಾಂಧಿಯವರಂತೆ ಮನುಕುಲದ ಕ್ಷೇಮಕ್ಕಾಗಿ ಹುತಾತ್ಮರಾದ ಬಸವಣ್ಣನವರು ಜಗಜ್ಯೋತಿಯಾಗಿದ್ದಾರೆ. ಜಗದಕವಿ, ಬಸವಣ್ಣ ಪುರಾಣ ಪುಣ್ಯಪುರುಷರಾಗಿ ಜನಮಾನಸದಲ್ಲಿರುವ ಶಕ್ತಿಯಾಗಿ, ನಾನಾ ವಿಧವಾಗಿ ವಿಕಾಸ ಹೊಂದುವ ಮೂಲಕ ಕನ್ನಡದ ಸಂಸ್ಕೃತಿಯೆಡೆಗೆ ವಿಶ್ವದ ಗಮನವನ್ನೆ ಸೆಳೆಯಲು ಕಾರಣಕರ್ತರಾದರು.

ಬಸವಣ್ಣ ವೀರಶೈವ ಸಮಾಜೋದ್ಧಾರಕ, ಲಿಂಗದ ಸ್ಥಾಪಕ ದಲಿತೋದ್ಧಾರಕ, ಶ್ರೇಷ್ಠ ವಚನಕಾರ ಮಹಾತ್ಮ ಕ್ರಾಂತಿಪುರುಷ, ಶಾಂತಿದೂತ ವಿಶ್ವದ ಸಮಾಜ ವಿಜ್ಞಾನಿ ಇವೆಲ್ಲವುಗಳು ಆಗುವ ಸಂದರ್ಭಗಳಲ್ಲಿರುವುದು ಯುಗಧರ್ಮದ ಮತ್ತು ಆ ಕಾಲದ ಸಂವೇದನೆಗಳ ಮಾನದಂಡವೇ ಬಸವಣ್ಣನ ವ್ಯಕ್ತಿತ್ವದಲ್ಲಿ ಈ ಎಲ್ಲ ಗುಣಗಳು ಕಂಡಂತೆ ಆತನ ವಚನಗಳಲ್ಲಿ ಭಾಷಾ ವಿಜ್ಞಾನಿಗಳಿಗೆ ಭಾಷಿಕ ಪ್ರಯೋಗಶೀಲತೆ ಸಾಹಿತ್ಯ ಅಭ್ಯಾಸಿಗಳಿಗೆ ಸೃಷ್ಟಿಸಲು ಪ್ರಕ್ರಿಯೆಯ ಶ್ರೇಷ್ಠ ಅಭಿವ್ಯಕ್ತಿಯಾಗಿ ಸಮಾಜ ಸುಧಾರಕ ಕ್ರಾಂತಿ ಪುರುಷನಾಗಿ ಕಾಣುತ್ತಾರೆ. ಹನ್ನೆರಡನೇ ಶತಮಾನದ ಸಾಮಾಜಿಕ ಪರಿಸ್ಥಿತಿಯಲ್ಲಿ ಮೇಲು-ಕೀಳು ಭಾವ, ಜಾತಿ ಭೇದ, ಸ್ತ್ರೀ ತಾರತಮ್ಯ ಧಾರ್ಮಿಕ ಪ್ರಭಾವ ರಾಜಪ್ರಭುತ್ವ ಇನ್ನಿತರ ಸಾಮಾಜಿಕ ಸ್ಥಿತಿಗತಿಗಳಿಂದ ತಂತ್ರಗಳಿಂದಾಗಿ ಬೇಸತ್ತಿದ್ದ ಜನರಿಗೆ ಹೊಸ ಜೀವನ ಮಾರ್ಗವನ್ನು ಬಸವಣ್ಣ ನೀಡಿದ. ಮಾನವೀಯತೆ, ನೈತಿಕತೆ ಸಾಮಾಜಿಕ ಸಮಾನತೆ, ಸ್ತ್ರೀ ಸಮಾನತೆ ಮುಂತಾದ ಸಮಾಜದ ಸ್ವಾಸ್ಥ್ಯಗಳನ್ನು ಪುಷ್ಠೀಕರಿಸುತ್ತಾ ಹೋದರು. ಈ ಜಾತೀಯತೆಯು ಸಂಘಟನೆ ಬಸವಣ್ಣನ ವ್ಯಕ್ತಿತ್ವದಿಂದ ಸಾಧ್ಯವಾಯಿತು. ಈ ಬಗೆಯ ಸಾಕ್ಷಿಪ್ರಜ್ಞೆಯ ಮನುಷ್ಯನ ಒಳಿತು ಕೆಡುಕುಗಳ ನಿರ್ವಹಣೆಯಲ್ಲಿ ಮುಖ್ಯವಾಗುತ್ತದೆ. ವೈಯಕ್ತಿಕವಾದ ಸಾಧನೆಗೆ ಸಾರ್ವತ್ರಿಕವಾದ ವಿಚಾರಗಳಲ್ಲಿ ನೈತಿಕತೆಯೂ ಮುಖ್ಯವಾಗಿದೆ. ಇತ್ತೀಚಿನ ಆಧುನಿಕ ಸಮಾಜದಲ್ಲಿ ಅಂತರ್ಜಾತಿ ವಿವಾಹಕ್ಕೆ ಮಾನ್ಯತೆ ದೊರೆಯುತ್ತಿದೆ. ಜಾತಿ ಅಸ್ಪೃಶ್ಯತೆ ನಿವಾರಣೆಗಾಗಿ ಹಲವು ಕಾನೂನುಗಳನ್ನು ಮಾಡಲಾಗಿದೆ. ಧನಿಕರಲ್ಲಿ ಜಾತಿ ಪ್ರಜ್ಞೆಯು ಇನ್ನೂ ಇರುವುದು ವಿಷಾದನೀಯ ಜಾತಿ, ಉಪ ಜಾತಿ, ಪಂಗಡಗಳು, ಗುಂಪುಗಳು ಬೇರೆ ಬೇರೆಯಾಗಿ ತಮ್ಮದೇ ಆದ ರಾಜಕೀಯಗಳನ್ನು ಬಳಸುತ್ತಿವೆ. ಸದ್ಯದ ಸ್ಥಿತಿಯಲ್ಲಿ ಜಾತಿ-ಜಾತಿಗಳ ನಡುವೆ ವಿವಾಹ, ಕುಲಕಸುಬುಗಳ ಪಲ್ಲಟ, ಆಹಾರ ಪದ್ಧತಿಯಲ್ಲಿ ಆಯ್ಕೆ ಕಂಡುಬರುತ್ತಿವೆ. ಆದರೂ ಜಾತಿ ಸಂಪೂರ್ಣವಾಗಿ ನಿವಾರಣೆಯಾಗದೆ ಆಧುನಿಕ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ. ಈ ವ್ಯವಸ್ಥೆಯ ವಿರುದ್ಧ ಪರಿವರ್ತನೆ ಮಹಾಪೂರವನ್ನೇ ತಂದ ಈ ಆಂದೋಲನದಲ್ಲಿ ವ್ಯಕ್ತಿಗತ ಸಾಧನೆ ಮತ್ತು ಸಾಮಾಜಿಕ ಬದಲಾವಣೆ ಪ್ರಮುಖ ಅಂಶಗಳಾಗಿದ್ದವು. ಇಂತಹ ಇತಿಹಾಸವನ್ನು ವಸ್ತುವಾಗಿಸಿಕೊಂಡ ಸಾ. ಶಿ. ಮರುಳಯ್ಯನವರು ಧಾರ್ಮಿಕ ಸಾಮಾಜಿಕ ಮತ್ತು ರಾಜಕೀಯದ ಪ್ರಮುಖ ನೇರ ನೋಟಗಳನ್ನು ಇಟ್ಟುಕೊಂಡು ಚಿತ್ರಣವನ್ನು ಕೊಡುವ ಮಹತ್ವದ ಕಾರ್ಯವನ್ನು ಇಲ್ಲಿ ಮಾಡಿದ್ದಾರೆ. ಈ 'ಬಸವಣ್ಣ ಬಂದಾನೊ!' ನೃತ್ಯರೂಪಕದಲ್ಲಿ ಮೂಲಭೂತವಾದ ಈ ನೋಟಗಳಿಗೆ ಬಸವಣ್ಣ ಮತ್ತು ಪ್ರಸ್ತುತ ಸಮಾಜ ಅತಿ ಮುಖ್ಯವಾದುದಾಗಿದೆ.

'ಬಸವಣ್ಣ ಬಂದಾನೊ!' ರೂಪಕದಲ್ಲಿ ಬರುವ ಪಾತ್ರಗಳು ಬಸವಣ್ಣ, ಗಂಗಾಬಿಕೆ, ಸಂಗಮೇಶ್ವರ ಗುರು, ಹರಳಯ್ಯ, ಮಧುವರಸ, ಕಂಬಳಿ ನಾಗಿದೇವ, ಮಾರಿಪೂಜಾರಿ, ಬಿಜ್ಜಳ ಮಂಚಣ್ಣ, ಕ್ರಮಿತ ಪೆದ್ದಿ ಜಗದೇಕ ಮಲ್ಲ ಬೊಮ್ಮರಸ ಇನ್ನು ಮುಂತಾದವರು. ಮೊದಲನೆಯ ದೃಶ್ಯದಲ್ಲಿ ಬಸವಣ್ಣ ತನ್ನ ಪತ್ನಿಯಾದ ಗಂಗಾಂಬಿಕೆಯೊಡನೆ ಕೂಡಲಸಂಗಮಕ್ಕೆ ಹೋಗಿ ಅಲ್ಲಿ ತನ್ನ ಶಿಕ್ಷಾಗುರು ಸಂಗಮೇಶ್ವರನ ಹತ್ತಿರ ಹೋಗಿ ಕಲ್ಯಾಣಕ್ಕೆ ಹೋಗಲು ಆಶೀರ್ವಾದ ಬೇಡುತ್ತಾರೆ. ಆಗ "ಸಂಗ ತುಂಬಾ ಸಂತೋಷ ಹೋಗಿ ಬನ್ನಿ ಬಸವಣ್ಣ ನಾನು ನಿನಗೆ ನಿಮಿತ್ತ ಮಾತ್ರ ಗುರು ನೀನು ಲೋಕಗುರುವಾಗಬೇಕು. ದೀನ ದಲಿತರ ಶೋಷಣೆ ಹೆಣ್ಣಿನ ಕಣ್ಣೀರು ಜಾತಿ ಸೂತಕ ಮೊದಲಾದ ಸಾಮಾಜಿಕ ಪಿಡುಗುಗಳನ್ನು ತೊಡೆದು ಹಾಕಬೇಕು. ಮನುಕುಲಕ್ಕೆ ಮಾನವೀಯತೆಯ ಮಹಾಪಾಠ ಕಲಿಸಬೇಕು. ನೀನು ಮಹಾತ್ಮನಾಗಬೇಕು......" (ವಾಗೀಶ-ಸಾ.ಶಿ.ಮ ಸಾಹಿತ್ಯ ಒಂದು ಅಧ್ಯಯನ 2012 ಪುಟ 187) ಎಂದು ಹೇಳಿ ಬಸವಣ್ಣನ ಮುಂದಿನ ಜೀವನಕ್ಕೆ ಅವರು ಗೊತ್ತು ಗುರಿಗಳನ್ನು ನಿಗದಿಪಡಿಸುತ್ತಾರೆ. ಕೂಡಲಸಂಗಮದಿಂದ ಕಲ್ಯಾಣಕ್ಕೆ ಬರುವಾಗ ಬಸವಣ್ಣ ಮಾರ್ಗ ಮಧ್ಯದಲ್ಲಿ ಅನೇಕ ದೃಶ್ಯಗಳನ್ನು ಕಾಣುತ್ತಾ ಸಮಾಜವನ್ನು ವಿಮರ್ಶೆ ಮಾಡುತ್ತಾರೆ.

ಎರಡನೇ ದೃಶ್ಯದಲ್ಲಿ ಶ್ರೀಗಂಧ ರುದ್ರಾಕ್ಷಿ ಎಂಬ ದಂಪತಿಗಳ ಕಲಹವನ್ನು ಲಾಲಿತ್ಯ ಶೈಲಿಯಲ್ಲಿ ವಿಡಂಬಿಸಿದ್ದಾರೆ.

"..... ಥೂ! ಹಾಳೂ ಬ್ರಹ್ಮ ಯಾರೋ ಹೆಣ್ಣನ್ನು ಮಾಡೆದ್ನೋ?<br>
ಹೆಣ್ಣು ಅನ್ನೋರ ಪ್ರಾಣಿ ಅಸ್ತಿತ್ವದಲ್ಲಿರದೇ! ಇಲ್ಲದಿದ್ದರೆ.....<br>
ಹೆಣ್ಣಿನ ಅಗತ್ಯವೇ ಇಲ್ಲವೆ ಮಕ್ಕಳನ್ನು ಹಡೆಯಲು.<br>
ಗಂಡಸರಿಗೆ ಸಾಧ್ಯವಿದ್ದಿದ್ದರೆ.......<br>
ಗಂಡು ಕುಲ ಎಲ್ಲಾ ದುಃಖಗಳಿಂದಲೂ ಮುಕ್ತವಾಗಿರ್ತಾ ಇತ್ತು!" (ಅದೇ ಪುಟ 199)

ಹೀಗೆ ಅವರಿಬ್ಬರೂ ಸರಸವಾಗಿ ಮಾತನಾಡುತ್ತಾ ಶರಣರಗಟ್ಟಿವಾಳಯ್ಯನ ದಾಂಪತ್ಯವನ್ನು ತಿಳಿಸುತ್ತಾರೆ.

ನಂತರ ಗಟ್ಟಿವಾಳಯ್ಯ ಬಸವಣ್ಣನ ಮಹಾಮನೆ ಮುಂದೆ ನಿಂತು ಅಲ್ಲಿಗೆ ಬಂದು ಹೋಗುವ ಶರಣನ್ನು ವಿಮರ್ಶಿಸುತ್ತಾನೆ.

ಈ ರಚನೆಯಲ್ಲಿ ದಾಂಪತ್ಯದ ಮಾದರಿಗಳನ್ನು ಚಿತ್ರಿಸಲಾಗಿದೆ. ಆಯ್ದಕ್ಕಿ ಮಾರಯ್ಯ ಲಕ್ಕಮ್ಮರದು ಹೊಂದಾಣಿಕೆಯ ಸಂಸಾರವಾದರೆ ಗಟ್ಟಿವಾಳಯ್ಯನದು ಬೇರ್ಪಟ್ಟ ಬದುಕಾಗುತ್ತದೆ. ಸುಖಮಯ ಸಂಸಾರವಾಗಬೇಕಾದರೆ ಹೊಂದಾಣಿಕೆ ಪ್ರೀತಿ-ಸಹಜೀವನ ಅವಶ್ಯಕ ಎಂಬುದನ್ನು ಈ ರೂಪಕವು ತಿಳಿಸುತ್ತದೆ.

ಅರಳಿ ಕಟ್ಟೆ ಸುತ್ತುತ್ತಿರುವ ಹುತ್ತಕ್ಕೆ ಹಾಲು-ತುಪ್ಪ ಬಿಡುವ ನಾಗರಕಲ್ಲಿಗೆ, ಹಾಲೆರೆಯುವ ಸನ್ನಿವೇಶದಲ್ಲಿ, "ಅಯ್ಯೋ! ಕಲ್ಲುಗಳಿಗೆ ಹುತ್ತಕ್ಕೆ ಹಾಲು ಬೇಕೆ? ಅದೇ ಹಾಲನ್ನು ಈ ಬಡ ಮಕ್ಕಳ ಬಾಯಿಗಳಿಗೆ ಹಣಿಬಾರದೇ? ಕಲ್ಲು ದೈವಗಳಿಗೆ ಸಲ್ಲುವ ಪೂಜೆ ಈ ಜೀವಂತ ದೈವಗಳಿಗಿಲ್ಲಾ" (ಸಾ.ಶಿ.ಮ-ಸ್ನೋವೈಟ್ ಮತ್ತು ಇತರ ನೃತ್ಯರೂಪಕಗಳು ರಾಗಿಣಿ ಪ್ರತಿಷ್ಠಾನ ಬೆಂಗಳೂರು-1999 ಪುಟ 180) ಇದು ಭಾರತದ ಧಾರ್ಮಿಕ ಪರಂಪರೆಯೊಂದನ್ನು ಬಿಂಬಿಸುವಲ್ಲಿ ಯಶಸ್ವಿ ಯಾದುದಾಗಿದೆ. ಹಲವಾರು ರೀತಿಯ ವೈರುಧ್ಯಗಳಿಂದ ಕೂಡಿದ್ದರೂ ವಿವಿಧತೆಯಲ್ಲಿ ಏಕತೆ ಎಂಬ

ಘೋಷಣೆಯ ಮೂಲಕ ವಾಸ್ತವವನ್ನು ಮರೆ ಮಾಡಲಾಗಿದೆ. ಅವಾಸ್ತವಿಕ ಕಲ್ಪನೆಗಳಿಂದ ಜನರನ್ನು ಮೋಸಗೊಳಿಸುವ ಪ್ರವೃತ್ತಿಯನ್ನು ಈ ದೇಶದ ಸಂಪ್ರದಾಯ ವಾದಿಗಳು ಬೆಳೆಸಿಕೊಂಡು ಬಂದಿರುವುದನ್ನು ಕವಿ ಇಲ್ಲಿ ಖಂಡಿಸುತ್ತಾರೆ. ಆದರ್ಶದ ಹೆಸರಿನಲ್ಲಿ ಸಮಾಜವನ್ನು ಛಿದ್ರ ಛಿದ್ರವಾಗಿ ಒಡೆದು ಹಾಕಲಾಗಿದೆ ಕಲ್ಪನೆಯನ್ನೇ ಸತ್ಯವೆಂದು ಪ್ರಚುರಪಡಿಸಲಾಗಿದೆ. ಮತ್ತೊಬ್ಬರ ಬದುಕಿಗೆ ಕಂಟಕಪ್ರಾಯವಾಗಿರುವ ಇಂಥದ್ದೊಂದು ಸಂಸ್ಕೃತಿ ಬೆಳೆಸಿದವರು ಸ್ವಾರ್ಥಿ ಜನರು ಅದನ್ನು ಒಪ್ಪಿಕೊಂಡು ನಡೆದರು ಮೂಢ ಜನರು ಎನ್ನುವುದನ್ನು ಕವಿ ನೃತ್ಯ ರೂಪಕದ ಮೂಲಕ ಮನಗಾಣಿಸುವ ಪ್ರಯತ್ನ ಮಾಡಿದ್ದಾರೆ.

ಆದರಿಂದ ಸಮಾಜ ಸುಧಾರಣೆಗೆ ಮೊದಲು ವ್ಯಕ್ತಿ ಸುಧಾರಣೆಯಾಗಬೇಕು. ವ್ಯಕ್ತಿಕೇಂದ್ರಿತವಾದ್ದು ಶರಣ ಸಮಾಜ ವ್ಯಕ್ತಿಸುಧಾರಣೆಗೆ ಆಧ್ಯತೆ ಕೊಡುತ್ತದೆ. ಹಾಗೇ ಮುಂದುವರೆದು ಮಾರಮ್ಮ ದೇವಿಯ ಜಾತ್ರಾ ಸಂದರ್ಭದಲ್ಲಿ ಪೂಜಾರಿ ಆವೇಶಭರಿತನಾಗಿ ಮೈದುಂಬಿ ಕುಣಿಯುತ್ತಾನೆ. ನಿಂಬೆಹಣ್ಣನ್ನು ನೆಲೆದ ಮೇಲಿಟ್ಟು ಹೋಳು ಮಾಡುತ್ತಾನೆ ............ ಬಲಿ ಬೇಡುವ ದೇವಿಯನ್ನು ಕಡೆಗಣಿಸಿದ ಬಸವ ಮುಂದುವರೆದು "ಹಾಗಾದರೇ ನಿನ್ನ ಮಗನನ್ನು ಕೇಳ್ತಾಳೆ ಬಲಿ ಕೊಡ್ತೀಯಾ?" (ಅದೇ ಪುಟ 185) ಎಂದು ಮೌಢ್ಯವಿರೋಧಿ ನೆಲೆಯನ್ನು ಸಮಾಜಕ್ಕೆ ಪರಿಚಯಿಸಿದ್ದಾರೆ.

ಮುಂದುವರೆದು ಜಾತಿ ಸಂಘರ್ಷವೆರ್ಪಟ್ಟಾಗ ಜನರಿಗೆ ಮನವರಿಕ್ಕೆ ಮಾಡುವ ಮೂಲಕ "ಇಂದಿನ ಸಮಾಜದಲ್ಲಿರುವ ಉಚ್ಚ ನೀಚ ಭಾವನೆಗಳನ್ನು ತೊಡೆದು ಹಾಕಬೇಕೆಂದು ನಾನು ಯೋಜಿಸಿದ್ದೆ ಅದನ್ನು ನೀವು ಕಾರ್ಯರೂಪಕ್ಕೆ ತಂದಿದ್ದಿರಿ ನನ್ನದು ಸಿದ್ಧಾಂತ, ತಮ್ಮಿಬ್ಬರದು ಪ್ರತ್ಯಕ್ಷ ಪ್ರಯೋಗ ಇಂದು ನೀವು ಈ ಜಗತ್ತಿಗೆ ಆದರ್ಶ ವ್ಯಕ್ತಿಗಳಾಗಿದ್ದಿರಿ, ಕೆಳಗಿನವರನ್ನು ಮೇಲೆತ್ತುವುದು ಎಷ್ಟು ಕಷ್ಟವೋ, ಮೇಲಿನವರಿಗೆ ತಿಳುವಳಿಕೆ ಕೊಡುವುದು ಅಷ್ಟೆ ಕಷ್ಟ. ಮಧುವರಸರ ಉದಾತ್ತತೆಗೆ ನಾನು ಶಿರಬಾಗುತ್ತೇನೆ" (ಅದೇ ಪುಟ 188) ಜನರ ಭಾಷೆಯಲ್ಲಿ ತಮ್ಮ ವಿಚಾರಗಳನ್ನು ಅಭಿವ್ಯಕ್ತಪಡಿಸಿದ ಬಸವಣ್ಣ ಸಮಾಜದಲ್ಲಿ ಬೇರೂರಿದ್ದ, ಕುರುಡು ನಂಬಿಕೆಗಳ ವಿರುದ್ಧ ವೈಚಾರಿಕತೆ ಕಹಳೆ ಊದಿದರು. ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ್ದಲ್ಲದೆ, ಅಂತರ್ಜಾತಿಯ ವಿವಾಹದಂಥ ಕ್ರಾಂತಿಕಾರಕ ಕೆಲಸ ಮಾಡಿದರು. 'ಕಾಯಕವೇ ಕೈಲಾಸ' ಎನ್ನುವ ಪರಿಕಲ್ಪನೆಯ ಮೂಲಕ ದೃಢವಾಗಿ ನಿಂತರು ಎಂದಿದ್ದಾರೆ ಸಾ. ಶಿ. ಮರುಳಯ್ಯನವರು.

ಕಲ್ಯಾಣದಲ್ಲಿ ಹರಳಯ್ಯ ಮತ್ತು ಮಧುವರಸರು ಪರಸ್ಪರ ಒಪ್ಪಿ ತಮ್ಮ ಮಕ್ಕಳ ಮಧುವೆಗೆ ಒಪ್ಪಿರುವ ವಿಚಾರ ಬಸವಣ್ಣನಿಗೆ ತಿಳಿದು ಸಂತೋಷಪಡುತ್ತಾನೆ. ಬಸವಣ್ಣನು ಅನುಭವ ಮಂಟಪದಲ್ಲಿ ಶೀಲವಂತ ಮತ್ತು ಲಾವಣ್ಯ ಇವರ ಕಲ್ಯಾಣವನ್ನು ಮಾಡಿ ಭರತ ಖಂಡದಲ್ಲಿ ಜಾತಿಯ ನಿರ್ಮೂಲಕ್ಕೆ ನಿಮ್ಮ ವಿವಾಹ ನಾಂದಿಯಾಗಲಿ ಎಂದು ಹರಸುತ್ತಾನೆ. ಜಾತಿ ಪದ್ಧತಿ ಶತಶತಮಾನಗಳ ಕಾಲದಿಂದಲೂ ಬೆಳೆದು ಬಂದಿರುವ ಕ್ರೂರ ಪದ್ದತಿ. ಜಾತಿಯ ಹಿನ್ನೆಲೆಯಲ್ಲಿ ವ್ಯಕ್ತಿಗಳನ್ನು ನೋಡುವ ಮೌಢ್ಯ, ಆ ನೆಲೆಯಲ್ಲಿ ಶೋಷಣೆ ಇನ್ನೂ ಹೋಗಿಲ್ಲ. ಶಿಕ್ಷಣ, ನಗರೀಕರಣ, ವಿಜ್ಞಾನದ ಬೆಳವಣಿಗೆಗಳಿಂದಲ್ಲೂ ನಮ್ಮ ದೇಶ ಜಾತಿ ಪದ್ಧತಿಯಿಂದ ಮುಕ್ತವಾಗದಿರುವುದು ನಮ್ಮ ದುರಂತ ವ್ಯಕ್ತಿ ವ್ಯಕ್ತಿಯ ನಡುವಿನ ತಾರತಮ್ಯ ಭಾವನೆ ಅಳಿದು ಮಾನವೀಯವಾಗಿ ನೋಡುವ ಗುಣ ಬೆಳೆಯಬೇಕಾಗಿದೆ ಶರಣರ, ಸಂತರ ಸಮಾನತೆಯ ಆಶಯ ಸಾಕಾರಗೊಳ್ಳಬೇಕಿದೆ. ಬದಲಾವಣೆಗಾಗಿ ಹಂಬಲಿಸುತ್ತಿರುವ ಸಮಾಜಕ್ಕೆ ಬಿಡುಗಡೆಯ ದಾರಿಯನ್ನು ತೋರಿಸುವ ದಿಕ್ಕಿನಲ್ಲಿ ಈ ನೃತ್ಯರೂಪಕ ಮುಖ್ಯವಾದುದಾಗಿದೆ.

ಸಾ.ಶಿ.ಮರು ನಿಜವಾದ ಅರ್ಥದಲ್ಲಿ ವಿಸ್ಮಯದ ಸೃಷ್ಟಿಕರ್ತ, ಪೀಡನೆ, ಹಿಂಸೆಗಳನ್ನು ಬಹಿರಂಗ ಪಡಿಸುವ ಖಂಡಿತವಾದಿ. ವರ್ತಮಾನದ ಘಟನೆ ಮತ್ತು ವ್ಯಕ್ತಿ ಮುಖಾಮುಖಿಯಾಗುವಲ್ಲಿ ನಿಜ ತೆರೆದುಕೊಳ್ಳುವುದೆಂಬ ತಿಳಿವಳಿಕೆ ಈ ನೃತ್ಯದಲ್ಲಿ ಮೂಡಿಬಂದಿದೆ.

'ವಿಶ್ವ ಮಾನವ ಬಸವ' ರೂಪಕದಲ್ಲಿ ಸಾಮಾಜಿಕ ಚಳುವಳಿಗಳ ಮೂಲಕ ವಿಶ್ವಮಾನತ್ವವನ್ನು ಸಾರಿದ ಹನ್ನೆರಡನೇ ಶತಮಾನದ ವಚನಕಾರರ ತತ್ವಗಳು ಹಾಗೂ ಜೀವನ ಪದ್ಧತಿಯನ್ನು ಇಟ್ಟುಕೊಂಡು ವಿಶ್ವಮಾನವ ಬಸವ ಮುಂತಾದವರು ಸಾಧಿಸಲು ಹೊರಟ್ಟಿದ್ದು, ಸಮಾಜ ಪರಿವರ್ತನೆಯ ದಿಟ್ಟ ನಿಲುವಾಗಿ ನಿಲ್ಲುತ್ತದೆ ಎಂಬುದನ್ನು ಕವಿ ಸಾ. ಶಿ. ಮರುಳ್ಯನವರು ಈ ನೃತ್ಯರೂಪಕದ ಮೂಲಕ ತೋರಿಸಿದ್ದಾರೆ.

ಕಲ್ಯಾಣವೆಂಬ ಕಾರ್ಯಕ್ಷೇತ್ರದಲ್ಲಿ ಬಸವಣ್ಣನೆಂಬ ಚಿಂತಕ ಹೋರಾಟಗಾರ ಸಂಘಟಕನು ನಿರ್ದೇಶಿತನಾದದ್ದು ಅಲ್ಲಮನಿಂದ ಹಾಗೂ ಅನುಭವ ಮಂಟಪದಿಂದ ಬಸವಣ್ಣನೇ ಕಟ್ಟಿಬೆಳೆಸಿದ ಅನುಭವ ಮಂಟಪವು ನಾಡಿನ ಶ್ರೇಷ್ಠ ಚಿಂತನಾ ಸಭೆಯಾಗಿತ್ತು. ಕಲ್ಯಾಣದಲ್ಲಿ ಭಕ್ತಿ ಹಾಗೂ ಆಚಾರಕ್ಕೆ ಬಸವಣ್ಣ ಜ್ಯೋತಿಯಾಗುತ್ತಾನೆ. ಆ ಜ್ಯೋತಿಯಿಂದಾಗಿ ಇಡೀನಾಡು ಪ್ರಜ್ವಲವಾಗಿ ಬೆಳಗುತ್ತಿದೆ. ಸಮಾಜದಲ್ಲಿನ ಅನಿಷ್ಟ ಪದ್ಧತಿಗಳಿಗೆ ಹಾಗೂ ಅವುಗಳಿಗೆ ವೈಚಾರಿಕ ಉತ್ತರವನ್ನು ರೂಪಿಸಿಕೊಡುವುದು ಮುಖ್ಯವಾಗಿದೆ.

ಸಮಾಜದಲ್ಲಿನ ಸ್ತ್ರೀ ಅನುಭವಿಸುವ ಯಾತನೆಗಳನ್ನು ಸಾಮಾಜಿಕ ಅವಹೇಳನೆಗಳನ್ನು ಮಾರ್ಮಿಕವಾಗಿ ಟೀಕಿಸಿದ್ದಾರೆ.

"ಅಮ್ಮನಿಗೆ ಕಾಗೆ ಮುಟ್ಟಿತಂತೆ
ಮೂರು ದಿವಸ ಹೊರಗೇ ಅಂತೆ
ಯಾರು ಮುಟ್ಟಕೊಡದಂತೆ
ಕೇರಿಗವಳು ದೂರವಂತೆ" (ಅದೇ ಪುಟ 527) ಎಂದು ತಿಳಿಸಿದಾಗ, ಬಸವಣ್ಣ ಈ ಪದ್ಧತಿಯನ್ನು ಮಗುವಿನ ಪ್ರಶ್ನೆ ಮೂಲಕ ಜೊತೆಯಾಗಿ ಕೊಡುತ್ತಾರೆ. ಇದೊಂದು ಸಾಮಾಜಿಕ ಮೌಢ್ಯ, ಆ ಮೌಢ್ಯಕ್ಕೆ ಸ್ತ್ರೀ ಬಲಿಯಾಗುತ್ತಿದ್ದಾಳೆ. ಅವಳು ಕುಡಿಯುವ ನೀರು ತಿನ್ನುವ ಅನ್ನ ಮೆಟ್ಟುವ ಚಪ್ಪಲಿಗೂ ಇಲ್ಲದ ಮೈಲಿಗೆ ಅವಳಿಗೇಕೆ? ಅದಕ್ಕಾಗಿ,

"ದಿನಬೆಳಗು ಸೂರ್ಯನನು ಹಡೆವ ಆಗಸಕಿಲ್ಲ
ಹೊಳೆಗೆ ಹುಟ್ಟನು ಕೊಟ್ಟ ಪರ್ವತಕ್ಕೆ ಹೊಲೆ ಇಲ್ಲ
ಪರಿಮಳದ ಹೂ ಕೊಡುವ ಗಿಡಕೆ ತಾ ಒಲೆಯಿಲ್ಲಾ
ಮುದವಡೆದು ಮಗುವೀಯುವ ತಾಯಿ ಹೆಣ್ಣಿಗೆ ಹೊಲೆಯೇ?" (ಅದೇ ಪುಟ 528) ಎಂದು ಪ್ರಶ್ನಿಸುತ್ತಾರೆ. ಬ್ರಾಹ್ಮಣ-ವೈಶ್ಯ ಸಮುದಾಯದಲ್ಲಿ ಹೆಚ್ಚಾಗಿ ಕಂಡುಬರುವ ಈ ಪದ್ಧತಿಯು ಸ್ತ್ರೀ ಕುಲಕ್ಕೆ ಮಾಡುತ್ತಿರುವ ಅವಮಾನವೆನ್ನಬಹುದು. ಈ ಎಲ್ಲಾ ಅನಾಗರೀಕ ನಿಯಮಗಳ ನಡುವೆ ಇರುವುದರ ಬದಲು ಅಗ್ರಹಾರವನ್ನು ಬಿಟ್ಟು ಕೂಡಲಸಂಗಮಕ್ಕೆ ಹೋಗೋಣ ಎಂದು ಬಸವಣ್ಣನು ಅಕ್ಕ ನಾಗಮ್ಮ ಹಾಗೂ ಚನ್ನಬಸವಣ್ಣನಿಗೆ ತಿಳಿಸುತ್ತಾನೆ. ಕುಟುಂಬಗಳಲ್ಲಿದ್ದ ಈ ಮೌಢ್ಯವನ್ನು ಸ್ವೀಕರಿಸದ ಬಸವಣ್ಣನ ಮನಸ್ಸು ಅಗ್ರಹಾರವನ್ನೇ ತೊರೆಯುವಂತೆ ಪ್ರೇರೆಪಿಸಿತು. ಹೀಗೆ ಸಾಗುತ್ತಿರುವ ಮಾರ್ಗದಲ್ಲಿ ಗ್ರಾಮ ದೇವತೆಗೆ ಕುರಿ ಕೋಳಿ ಕೋಣಗಳ ಬಲಿದಾನ ಚಾಟಿಯಿಂದ ಮೈ ಸೆಳೆದುಕೊಳ್ಳುವ ವರ್ತನೆ, ಸಿಕ್ಕವರನ್ನೇ ನುಂಗಿಹಾಕುತ್ತೇನೆಂದು, ಬಾಯ್ದೆರೆದು ನಿಂತ ರಕ್ತಸಿಕ್ತ ನಾಲಿಗೆಯ ದೇವತೆ ಭೂಮಿಗೆ ಆದಿ ಶಕ್ತಿಯೇ ಅವತರಿಸಿ ಬಂದಿದ್ದಳೇ ಎಂಬಂತೆ ಭಕ್ತಿ ಪರವಶರಾಗಿ ಕಾಣುವ ಜನತೆಯನ್ನೆಲ್ಲಾ ಬಸವಣ್ಣನು ಗಮನಿಸುತ್ತಾನೆ. ಮಡಕದೈವ ಮೊರದೈವ ಬೀದಿಯ ಕಲ್ಲು ದೈವ...... ಎಂಬ ಇತ್ಯಾದಿ ವಚನಗಳನ್ನು ಸಂದರ್ಭವರಿತು ಹೇಳಿದ್ದಾರೆ. ಗ್ರಾಮ ದೇವಿಯ ಮೈಮೇಲೆ ಆವಾಹಿಸಿಕೊಂಡಿರುವ

ಪೂಜಾರಿ ದೇವಿ ಹಾವಾರಾ ಬೇಡುವ ಸಂದರ್ಭವನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಯಾವ ದೇವರು ಪ್ರಾಣಿ ಬಲಿಯನ್ನು ಬೇಡುವುದಿಲ್ಲ. ಹಾಗೇನಾದರೂ ಆದರೆ ಹೆತ್ತತಾಯಿಯೇ ತನ್ನ ಮಗುವನ್ನು ತಿಂದಂತೆ ಆಗುತ್ತದೆ ಎಂದು ಹೇಳಿದಾಗ ಪೂಜಾರಿ ಅದೇನೂ ಗೊತ್ತಿಲ್ಲ. ಒಟ್ಟಿನಲ್ಲಿ ತಾಯಿಗೆ ಹಾವರಾ ಬೇಕು ಎಂದು ತನ್ನ ಅಜ್ಞಾನವನ್ನು ತೋರಿಸುತ್ತಾನೆ ಅಂತೆಯೇ ದೇವರುಗಳು ಗಂಡು–ಹೆಣ್ಣು, ಧನಿಕ–ದರಿದ್ರ, ಪಾಪಿ ಪುಣ್ಯವಂತ, ಮೇಲು–ಕೀಳುಗಳನ್ನು ಮಾಡುವುದಿಲ್ಲ. ಅದನ್ನೆಲ್ಲ ಸೃಷ್ಟಿಸುವವರು ಪೂಜಾರಿಗಳೇ ಆಗಿರುತ್ತಾರೆ.

ಎನ್ನುವ ಇಲ್ಲಿನ ಬಸವಣ್ಣನವರ ವಚನ ಮೇಲು–ಕೀಳುಗಳನ್ನು ಟೀಕಿಸುತ್ತದೆ. ಕಲ್ಲುಗಳಿಗೆ ಹಾಲೂ ತುಪ್ಪವನ್ನು ಎರೆಯು ಮೂಢತೆಯನ್ನು ಖಂಡಿಸಿರುವ ಪ್ರಯತ್ನವನ್ನು ಇಲ್ಲಿ ಕಾಣಬಹುದು. ಬಸವಣ್ಣನ 'ಮನೆಗೆ ಕಳ್ಳ ಬಂದಾ' ರೂಪಕದಲ್ಲಿ ಭಿನ್ನವಾಗಿ ಅಭಿವ್ಯಕ್ತಿಸಲಾಗಿದೆ. ಮನೆಯೊಳಗೆ ಮನೆಯೊಡನಿಲ್ಲ... ವಚನವನ್ನಿಟ್ಟುಕೊಂಡು ಸುಳ್ಳಿ–ನೊಂದು ಚೊಳ್ಳು ಮನೆಗೆ ಕಳ್ಳ ಬಂದನೆ, ಮನೆಗೆ ಕಳ್ಳ ಬಂದನೆ... ಎನ್ನುವ ಹಾಡಿನ ಮೂಲಕ ದೇಹದಲ್ಲಿ ನಾನಾ ದುರ್ಗುಣ ತುಂಬಿಕೊಂಡಿರುವ ವ್ಯಕ್ತಿಯ ದೇಹಕ್ಕೆ ಅರಿವೆಂಬ ಕಳ್ಳ ಬರುತ್ತಾನೆ. ಬಸವಣ್ಣನ ಮನೆಗೆ ಬಂದ ಭೀಮಣ್ಣನೆಂಬ ಕಳ್ಳ ಅಲ್ಲಿನ ಜನರ ಕೈಗೆ ಸಿಕ್ಕಿ ಹಾಕಿಕೊಳ್ಳುತ್ತಾನೆ. ಕೊನೆಗೆ ಬಸವಣ್ಣನಲ್ಲಿ ಕ್ಷಮಿಸುವಂತೆ ಕೋರುತ್ತಾನೆ. ಅದಕ್ಕೆ ಬಸವಣ್ಣ ನೀನೆ ಆರಾಧ್ಯ ದೈವ ಸ್ವರೂಪಿ! ಸಂಗಮನಾಥನೇ ಜಂಗಮವೇಷದಲ್ಲಿ ನನ್ನ ಮನೆಗೆ ಬಂದಿದ್ದಾನೆ ನನ್ನನ್ನು ಎಚ್ಚರಿಸುವುದಕ್ಕೆ ಎನ್ನುತ್ತಾರೆ.

"ನೋಡು ಈ ವಸ್ತ್ರ ಈ ಒಡವೆ
ನಿನ್ನಂಥ ದುಡಿದವರ ಬೆವರ ರೂಪದ ಹೊನ್ನು
ಇದುವರೆಗೂ ಅಪಹರಿಸಿಕೊಂಡಿದ್ದ ನಾನು ನಿಜವಾದ ಕಳ್ಳ
ನೀನೆಲ್ಲ ಕೇಳು" (ಅದೇ ಪುಟ 545)

ಇಲ್ಲಿ ಬಸವಣ್ಣನಿಂದ ಬರುವ ಮಾತುಗಳು ಭೀಮಣ್ಣನ ಮನ ಪರಿವರ್ತನೆ ಮಾಡುವ ಮೂಲಕ ಅವನನ್ನು ಕಳ್ಳತನ ವೃತ್ತಿಯನ್ನು ಬಿಟ್ಟು ಬಿಡುವಂತಾಗುತ್ತದೆ.

ಸಮಾಜದ ಸುಧಾರಣೆಯ ಚಳುವಳಿಯಲ್ಲಿ ವರ್ಣ ಸಂಕರತೆ ಸೃಷ್ಟಿಯಾಗುವ ಭಯ ಹೊತ್ತ ಮೇಲ್ವರ್ಗದವರು ಬಸವಣ್ಣನನ್ನು ದೂರ ಹೋಗುವಂತೆ ಮಾಡುತ್ತಾರೆ. ಹರಳಯ್ಯನ ಮಗ ಮತ್ತು ಮಧು ವರಸರ ಮಗಳ ಅಂತರ ಜಾತಿ ವಿವಾಹ ಕಲ್ಯಾಣದಲ್ಲಿ ಬಹುದೊಡ್ಡ ಕ್ರಾಂತಿಯನ್ನೇ ಹುಟ್ಟುಹಾಕುತ್ತದೆ. ವಧುವರರಿಗೆ ಮರಣದಂಡನೆ ಶಿಕ್ಷೆಯನ್ನು ಬಿಜ್ಜಳನು ಆಜ್ಞೆಮಾಡುತ್ತಾನೆ. ಇದರಿಂದ ಬಸವಣ್ಣ ಮಂತ್ರಿ ಪದವಿ ಬಿಟ್ಟು ಸಂಗಮದತ್ತ ಸಾಗುತ್ತಾನೆ. ಬಿಜ್ಜಳನ ಕೊಲೆಯಾಗುತ್ತದೆ. ಕಲ್ಯಾಣದಲ್ಲಾಗುವ ಈ ಅವಘಡ ನಾಡನ್ನೆಲ್ಲಾ ವ್ಯಾಪಿಸುವ ಮೂಲಕ ಮಾನವೀಯತೆ ಮೆರೆಯಲು ಹೊರಟಿದ್ದ ತತ್ವಜ್ಞಾನಿಯೊಬ್ಬ ಇಹಲೋಕ ತ್ಯಜಿಸಿದನ್ನು ಕುರಿತು ಲೇಖಕರು.

"ಅಯ್ಯೋ!
ಬಸವ ಮೆಟ್ಟಿದ ಭೂಮಿ ಪಾಳು ನೆಲವಾಯಿತು
ಅವನದೆ ಹಸೆ ಮೇಲೆ ದೈತ್ಯತೇಯ ನರ್ತನವೆ
ಅವನಿತ್ತ ದಯೆಧರ್ಮ ಎಲ್ಲಾ ಹುಸಿಯಾಯ್ತೆ .....
ಅವನ ಹಿಂದೆಯೆ ಹೊಯ್ತೆ ಮಾನವ ಆಚಾರ
ಕಳೆದು ಹೊಯ್ತೆ ಬಸವ ಮನ್ವಂತರ" (ಅದೇ ಪುಟ 552) ಎನ್ನುವ ವಚನದಲ್ಲಿ ಬಸವಣ್ಣನ ಇಡೀ ವ್ಯಕ್ತಿತ್ವವನ್ನು ಸಾದರ ಪಡಿಸಿದ್ದಾರೆ. ಸ್ತ್ರೀಯರಿಗೆ ಕಣ್ಣಾಗಿದ್ದ, ದೀನ ದಲಿತರಿಗೆ ದಯೆಯಾಗಿದ್ದ, ಹಸಿದವರಿಗೆ ಅನ್ನದಾತನಂತಿದ್ದ ಬಸವಣ್ಣನ ಅವಸಾನವು ದಿಗ್ಭ್ರಮೆಯನ್ನು ಮೂಡಿಸುತ್ತದೆ.

ಮನೆಯಲ್ಲಿನ ಮುಂಜಿ ಮಡಿ–ಮೈಲಿಗೆ ಮುಟ್ಟು ಚೆಟ್ಟುಗಳಂತಹ ಮೌಢ್ಯ ಪದ್ಧತಿಗಳನ್ನು ದಿಕ್ಕರಿಸಿ ಕೂಡಲದತ್ತ ಚನ್ನಬಸವಣ್ಣ ಮತ್ತು ಅಕ್ಕನಾಗಮ್ಮರೊಂದಿಗೆ ಸಾಗಿದ ಬಸವಣ್ಣ, ಸಮಾಜದಲ್ಲಿನ ಅನೇಕ ಪದ್ಧತಿಗಳನ್ನು ತೊಡೆದು ಹಾಕಲು ಪ್ರಯತ್ನಿಸಿದನು. ಜಾತಿ ಪದ್ಧತಿಯನ್ನು ದೂರ ಮಾಡಿ ಅನುಭವ ಮಂಟಪವೆಂಬ ಸಾಮರಸ್ಯ ವೇದಿಕೆಯನ್ನು ನಿರ್ಮಿಸಿದ. ಮನೆಗೆ ಕಳ್ಳತನಕ್ಕೆ ಬಂದ ಕಳ್ಳನನ್ನೇ ಸಂಗಮನಾಥನೆಂದು ಸತ್ಕರಿಸಿ ಕೆಟ್ಟತನವನ್ನು ಒಳ್ಳೆತನದತ್ತ ಪರಿವರ್ತಿಸಿದ ಜಾತಿ ಮತಗಳ ಸಮಾನತೆಗಾಗಿ ಕೆಳವರ್ಗ, ಮೇಲ್ವರ್ಗಗಳ ನಡುವೆ ವಿವಾಹ ಸಂಬಂಧವನ್ನು ಏರ್ಪಡಿಸಿದ ಇಂತಹ ಅನೇಕ ಸುಧಾರಣೆಗಳನ್ನು ರಾಜನ ಆಸ್ಥಾನದಲ್ಲಿದ್ದು ಕೈಗೊಂಡ ಮಹಾನ್ ವ್ಯಕ್ತಿಯಾಗಿ ಬಸವಣ್ಣರವರು ರೂಪಗೊಳ್ಳುತ್ತಾರೆ. ಅತಂಹ ವ್ಯಕ್ತಿತ್ವವನ್ನು ನೃತ್ಯ ರೂಪಕದ ಮೂಲಕ ಪರಿಚಯಿಸುವ ಸಾ.ಶಿ.ಮರುಳಯ್ಯನವರ ಉದ್ದೇಶ, ಆಶಯಗಳನ್ನು ಜನತೆಗೆ ತಲುಪಿಸುವ ಸದಾಶಯದಿಂದ ನಿರ್ಮಿಸಿದ ವಿಶ್ವಮಾನವ ಬಸವ ನೃತ್ಯ ರೂಪಕವು ಮನೋಜ್ಞವೂ ಭೋದ ಪ್ರದವೂ ಆಗಿದೆ ಸಾಹಿತ್ಯ ಮತ್ತು ನೃತ್ಯ ರೂಪಕದಲ್ಲಿ ತನ್ನ ಸ್ಥಾನವನ್ನು ಭದ್ರ ಪಡಿಸಿದ ಕವಿಸಾ.ಶಿ.ಮರುಳಯ್ಯನವರ ಕೃತಿ ರಚನಾ ಕೌಶಲ್ಯ, ಅಭಿವ್ಯಕ್ತಿಸುವ ಮೋಡಿಗಳು, ಪರಿಷ್ಕೃತಗೊಂಡ ಬಳಕೆಯಾಗುವ ವಚನಗಳು, ಪರಿಷ್ಕರಗೊಳ್ಳಬೇಕಾದ ಆಚರಣೆಗಳು ಪ್ರಸ್ತುತ ಸಮಾಜಕ್ಕೊಂದು ತಾತ್ವಿಕ ಸಂದೇಶವನ್ನು ಹಿಡಿದಿಡುತ್ತದೆ.

ಹೀಗೆ ವಚನಕಾರರ ವಿಚಾರಗಳು ಮಾನವೀಯ ಮೌಲ್ಯಗಳನ್ನೊಳಗೊಂಡ ಸಮಾನತೆಯ ಸಮಾಜವನ್ನು ಕಟ್ಟುವ ಪ್ರಯತ್ನ ಮಾಡಿವೆ. ಇಂತಹ ವಿಚಾರಗಳು ಇಂದು ನಿತ್ಯವೂ ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡಲ್ಲಿ ಸುಂದರ, ಸದೃಢ ಸಮಾಜವನ್ನು ಸಾಕಾರಗೊಳಿಸಬಹುದಾಗಿದೆ. ಅಂತಹ ನಿರೀಕ್ಷೆಯೊಂದಿಗೆ ಸಾ. ಶಿ. ಮರುಳಯ್ಯನವರು ಉತ್ತಮಾಂಶಗಳನ್ನು ಸಮಾಜಕ್ಕೆ ಪುನರ್ ಮನನ ಮಾಡುವ ಪ್ರಯತ್ನವು ಇಂದಿನ ಯುವ ಪೀಳಿಗೆಗೆ ದಾರಿದೀಪವಾಗಬಲ್ಲದು. ಬಸವಾದಿಗಳ ತತ್ವ ಚಿಂತನೆಗಳು ಕೇವಲ 12ನೇ ಶತಮಾನಕ್ಕೆ ಸೀಮಿತವಲ್ಲ. ಅವು ಅನಾದಿ ಮತ್ತು ಅನಂತವಾಗಿದ್ದು, ಸಾರ್ವಕಾಲಿಕವಾದವೆಂದು ಸಾ.ಶಿ.ಮರವರು ತಿಳಿಸಿದ್ದಾರೆ.

ವಿಶಾಲವಾದ ಭೂಮಿಯ ಮೇಲೆ ಲಕ್ಷಾನು–ಲಕ್ಷ ವರ್ಷಗಳಿಂದ ವಾಸವಾಗಿರುವ ಮನುಷ್ಯ ಜೀವಿಯು ನೈತಿಕತೆಯ ಜೀವನ ನಡೆಸಲು ನಿರ್ಮಿಸಿಕೊಂಡ ಸಾಧನವೆ ಧರ್ಮ. ಅಹಿಂಸಾತ್ಮಕ ಆಚರಣೆಯಿಂದ ವಿಶ್ವದ ಎಲ್ಲ ಧರ್ಮಗಳನ್ನು ಗಮನಿಸಿದಾಗ ಅಹಿಂಸೆಯ ತತ್ವಗಳು ಕಂಡುಬರುತ್ತದೆ. ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿರುವ ದೇಶ. ಇಲ್ಲಿ ಬಹು ಧರ್ಮೀಯರು ನೆಲೆಸಿದ್ದಾರೆ. ಆದ್ದರಿಂದ ಅವರು ತಮ್ಮ ಧರ್ಮದ ಬಗ್ಗೆ ಅಭಿಮಾನ ಹೊಂದಿರುವುದರೊಂದಿಗೆ ಪರಧರ್ಮದ ತತ್ವಾದರ್ಶಗಳನ್ನು ಅರಿತು ಗೌರವಿಸುತ್ತ ಸಹೋದರರಂತೆ ಸಹಬಾಳ್ವೆ ನಡೆಸುತ್ತಿದ್ದಾರೆ. ಅಂಹಿಸಾ ತತ್ತ್ವವು ಯಾವುದೇ ದೇಶ ಶಾಂತಿ, ಸ್ಥಿರತೆ ಹಾಗೂ ಪ್ರಗತಿ ಪಥದಲ್ಲಿ ಮುನ್ನಡೆಯುವುದಕ್ಕಿರುವ ಮೂಲ ಸೂತ್ರವಾಗಿದೆ. ಗತಕಾಲದ ಇತಿಹಾಸವನ್ನು ಗಮನಿಸಿದಾಗ, ಇಡೀ ವಿಶ್ವವೇ ಹಿಂಸೆಯಿಂದ ಅಹಿಂಸೆಯತ್ತ ಸಾಗುತ್ತ ಬಂದಿರುವುದು ಕಂಡುಬರುತ್ತದೆ. ಪ್ರಾಚೀನ ಕಾಲದಲ್ಲಿ ವೈದಿಕರು ಯಜ್ಞ–ಯಾಗಾದಿಗಳನ್ನು ಮಾಡಿ ಅದರಲ್ಲಿ ಪ್ರಾಣಿ ಬಲಿಯನ್ನು ಮಾಡುತ್ತಿದ್ದರು. ಅದನ್ನು ತಡೆಯಲು ಹುಟ್ಟಿದ ಧರ್ಮವೇ ಜೈನ ಹಾಗೂ ಬೌದ್ಧಧರ್ಮ. ಆದರೂ ಮೊದಲಿನಿಂದಲೂ ಅಹಿಂಸೆಯ ತತ್ತ್ವಗಳನ್ನು ಎತ್ತಿಹಿಡಿದದ್ದೇ ಜೈನಧರ್ಮವಾಗಿದೆ. ರಾಮಯಣ ಹಾಗೂ ಮಹಾಭಾರತ, ಅಹಿಂಸಾ ತತ್ತ್ವವನ್ನು ಸಾರುತ್ತವೆ. ಈ ವಿಶ್ವದಲ್ಲಿನ ಪ್ರತಿಯೊಂದು ಜೀವರಾಶಿಯನ್ನು ಪ್ರಗತಿಯ ಕಡೆಗೆ ಕರೆದ್ಯೊಯುವ ಹಾಗೂ ಸುಖದ ದಾರಿಯಲ್ಲಿ ನಡೆಸುವ

ಆಶ್ವಾಸನೆಯನ್ನ ನೀಡುವದೇ ಅಹಿಂಸಾ ತತ್ವವಾಗಿದೆ.

ಬೌದ್ಧಧರ್ಮವು ಜಾಗತಿಕ ಕ್ರಾಂತಿಯನ್ನುಂಟು ಮಾಡಿದ್ದು. ಅಹಿಂಸೆಯಿಂದಾಗಿಯೇ ವಿಶ್ವಧರ್ಮವೆನಿಸಿತು. ಅಹಿಂಸೆಯಿಂದಲೇ ಹಿಂಸೆಯನ್ನ ಗೆಲ್ಲಬೇಕೇಂದು ಬುದ್ದನು ಉಪದೇಶಿಸಿದರೆ, ಸಾಮ್ರಾಟ ಅಶೋಕನು ಕಳಿಂಗಯುದ್ದ ಗೆದ್ದ ಬಳಿಕವೂ ವಿರಕ್ತನಾಗಿ ಅಹಿಂಸಾವ್ರುತ ಪಾಲಕನಾಗಿ ವಿಶ್ವದ ಇತಿಹಾಸದಲ್ಲಿಯೇ ಗಣ್ಯ ಚಕ್ರವರ್ತಿಯೆನಿಸಿದನು. ಭಗವಾನ್ ಬುದ್ಧರು ತಮ್ಮ 'ಧಮಪದದ' ಒಂದು ಗಾಹೆಯಲ್ಲಿ "ಹಿಂಸೆಗೆ ಎಲ್ಲರೂ ನಡುಗುವರು, ಮರಣಕ್ಕೆ ಎಲ್ಲರೂ ಹೆದರುವರು, ತನ್ನ ಹಾಗೆ ಇತರರು ಎಂದು ಯೋಚಿಸಿ ಇತರರನ್ನು ಕೊಲ್ಲಬಾರದು ಅಥವಾ ಕೊಲ್ಲಿಸಬಾರದು" ಎಂದು ತಿಳಿಸಿದ್ದಾರೆ. (ವಾಗೀಶ–ಸಾ.ಶಿ.ಮ ಸಾಹಿತ್ಯ ಒಂದು ಅಧ್ಯಯನ 2012 ಪುಟ 193) ಆದರೆ ಈ ತತ್ತ್ವವು ಮನಷ್ಯನ ಮನಸ್ಸಿನಲ್ಲಿ ಇಲ್ಲವಾಗುತ್ತಾ ಸಾಗುತ್ತಿದೆ. ಮನಸ್ಸನ್ನು ಸರಿಮಾಡಿಕೊಳ್ಳಲು ಸಾದ್ಯವಾದರೆ ನಾವು ಸರಿ ತಪ್ಪುಗಳನ್ನು ನಡೆ ನುಡಿ, ಆಚಾರ ವಿಚಾರಗಳನ್ನು ಸರಿಮಾಡಿಕೊಳ್ಳಬಹುದು. ಬೌದ್ಧ ಧರ್ಮದ ಸಾರವೆಂದರೆ ಪಾಪ ಕಾರ್ಯ ಮಾಡಬೇಡ, ಪುಣ್ಯಕಾರ್ಯದಲ್ಲಿ ತೊಡಗು, ಮನಸ್ಸನ್ನು ಅಭಿವೃದ್ಧಿಪಡಿಸಿಕೊಂಡು ಮನದಲ್ಲಿರುವ ಎಲ್ಲ ಕಲ್ಮಶಗಳನ್ನು ತೆಗೆದು ಹಾಕುವುದಾಗಿದೆ. ಬುದ್ಧನ ಪ್ರಮುಖ ವಿಚಾರವೆಂದರೆ "ವೈರದಿಂದ ವೈರೆ ಎಂದೂ ಶಮನವಾಗುವುದಿಲ್ಲ' ವೈರದಿಂದ ಸಮಾಜ ನಿರ್ಮೂಲನವಾಗಿ, ಇಡೀ ಮನುಕುಲವೇ ಹಾಳಾಗುತ್ತದೆ. ಆದ್ದರಿಂದ ವೈರಭಾವವನ್ನ ಬಿಟ್ಟು ಮಾತುಕತೆಯ ಮೂಲಕ ಪ್ರೀತಿ ವಿಶ್ವಾಸದಿಂದ ನಾವು ಬದುಕಿದರೆ ಜಗತ್ತು ಶಾಂತವಾಗಿ ಇರುತ್ತದೆ. ಬುದ್ಧ: ಮೇಲೇಳು ಸೋದರನೆ, ನಾನೊಬ್ಬ ಬೈರಾಗಿ ಮಡದಿ ಮಗು ಮನೆ ಮಾರು ರಾಜ್ಯ ಕೋಶಾದಿಗಳ ಉತ್ತರಿಸಿ ನಾ ಬಂದೆ ಸತ್ಯದನ್ವೇಷಣೆಗೆ! ಹುಟ್ಟು ಸಾವುಗಳೇಂಬ ಅವ್ಯಕ್ತ ದಡದಲ್ಲಿ ಬಾಳ ನದಿ ಹರಿಯುತ್ತಿದೆ ಆದ ತಿಳಿಯಲೈದಿದೆನು! ಆಶೆ ನಾಶದ ಹೇತು. ಆಶೆ ಎಂಬುದು ಪಾಶ ಅದ ಬಿಡಸೆ ಹೊರಟಿಹೆನು.. ಬಾ ಬಂದು ಭಾ ಬಿಕ್ಷು!" (ಅದೇ ಪುಟ 193) ಎಂದು ಆಹ್ವಾನಿಸುತ್ತಾರೆ.

ಈ ಸೃಷ್ಟಿಯಲ್ಲಿ ಭಿನ್ನ ಭೇದಗಳಿರುವುದಿಲ್ಲ. ಮನುಷ್ಯನೇ ತರತಮಗಳನ್ನು ಸೃಷ್ಟಿಸಿಕೊಂಡಿದ್ದಾನೆ. ಆಳು–ಅರಸ, ಉಚ್ಚ–ನೀಚ, ಬಡವ–ಬಲ್ಲಿದ, ಮುಂತಾದ ವರ್ಗ ಭೇದಗಳು ಆಧುನಿಕ ಸಮಾಜವನ್ನು ಅತಿಯಾಗಿ ಕಾಡುತ್ತಿವೆ. ಇಂತಹ ತಾರತಮ್ಯವನ್ನು ಮೀರಿ ನಿಲ್ಲಲು ಕನ್ನಡದ ಪ್ರಾಚೀನ ಕಾವ್ಯಗಳು ನಿದರ್ಶನವಾಗಿವೆ.

ಸ್ವಾತಂತ್ರ್ಯ ಹೋರಾಟದ ಹಿನ್ನಲೆಯನ್ನು 'ಬಿಡುಗಡೆಯ ಬೆಳಕೆ' ನೃತ್ಯರೂಪಕದಲ್ಲಿ ಆರಂಭದ ಹಾಡುಗಳು ಮತ್ತು ಗದ್ಯಗಳು ಧ್ವನಿಸುತ್ತದೆ. ಬ್ರಿಟಿಷರಿಂದ ನಮಗೆ ಸ್ವಾತಂತ್ರ್ಯ ದಾನವಾಗಿ ಬಂದಿಲ್ಲ. ಅದು ಭಾರತ ಮಾತೆಯ ಮಕ್ಕಳ ಬಲಿದಾನದ ಫಲ ಎನ್ನುತ್ತಾರೆ. ಲಲಜಪತರಾಯರ ಮರಣ, ಅಮೃತಸರದ ಜಲಿಯನ್ ವಾಲ್‌ಬಾಗ್ ದುರಂತಗಳಲ್ಲಿ ಮಡಿದ ಅನೇಕ ಅಮಾಯಕರನ್ನು ನೆನೆಪು ಮಾಡಿಕೊಳ್ಳುತ್ತಾರೆ. ನಂತರ ಲಾವಣಿ ಪದಗಳ ಮೂಲಕ ಶಿವಮೊಗ್ಗೆಯ ಬಳಿಯ ಈಸೂರು ದುರಂತವನ್ನು ಚಿತ್ರಿಸುತ್ತಾರೆ.

ಬ್ರಿಟಿಷ ಸಾಮ್ರಾಜ್ಯ ಶಾಹಿಯ ವಿರುದ್ಧ ಈಸೂರು ಸ್ವಾತಂತ್ರ್ಯವನ್ನು ಘೋಷಿಸಿಕೊಂಡು ದಫ್ತರ್‌ಗಳನ್ನು ಸುಟ್ಟುಹಾಕಿ ಭಾರತದ ಧ್ವಜವನ್ನು ಹಾರಿಸಿ ಅನೇಕ ಪ್ರತಿಭಟನೆಗಳನ್ನು ಮಾಡಿದ್ದರು. ಆಗ ದೊಡ್ಡ ಪಡೆಯೊಂದಿಗೆ ಆಗಮಿಸಿದ ಮಿಲಿಟರಿ ಪೋಲೀಸರು ನಡೆಸಿದ ದೌರ್ಜನ್ಯ ಕುರಿತು ಈಸೂರಿನಲ್ಲಿ ಆದ ಮಾರಣ ಹೋಮವನ್ನು ಚಿತ್ರಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಅಂಕೋಲದ ಬಳಿ ಇರುವ ಕೂರ್ವೆ ಎಂಬ ಅಂಬಿಗರ ಬೀಡು. ಅದು 1943ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ನಾಯಕರಾದ ಪಿ. ಎಸ್. ನಾರಾಯಣರಾಯರು ಗುಪ್ತವಾಗಿ ಆಶ್ರಯ ಪಡೆದಿದ್ದರು. ಅಲ್ಲಿ ಚಳುವಳಿಯ ಕರಪತ್ರಿಗಳು ಕಲ್ಲಚ್ಚಿನ ಸುದ್ದಿ ಪತ್ರಿಕೆಗಳನ್ನು ಗುಟ್ಟಾಗಿ ಮುದ್ರಿಸುತ್ತಿದ್ದರು. ಆ ಬೀಡಿನ ಮೇಲೆ ಪೋಲೀಸರು ದಾಳಿ ಮಾಡುತ್ತಾರೆ. ಆಗ ಆ ಬೀಡಿನ ಚೆಲ್ವಿ ಎಂಬ ಹೆಣ್ಣುಮಗಳ ದಿಟ್ಟ ನಿರ್ಧಾರದಿಂದ ಕಾರ್ಯಚರಣೆಯೂ ವಿಫಲವಾಗುತ್ತದೆ. ನಾರಾಯಣರಾಯರನ್ನು ಕಾಪಾಡುವಂಥ ಸಮಯದಲ್ಲಿ ಆ ಹೆಣ್ಣು ಸಂದಿಗ್ದಕ್ಕೆ ಸಿಲುಕುತ್ತಾಳೆ. "ಚೆಲ್ವಿ (ಚಿಂತೆಗೊಳಗಾಗಿ) ದ್ಯಾವ್ರೇ ಎಂತಾ ಸಂಕಟ ಕೊಟ್ಟೆಪ್ಪ ಈಗೇನೆ ಮಾಡ್ಲಿ. ಈ ಪಾಪಿ ಕೂಡದಿದ್ರೆ ಎಲ್ಲರನ್ನು ಸುಟ್ಟುಹಾಕ್ತಾನೆ, ಸೆರೆ ಹಿಡಿತಾನೆ? ಒಪ್ಪಿದ್ರೆ ನಾನು ಶೀಲ ಕಳಕೊಂಡ ಕೊಳಕಿ ಆಗ್ತೀನಿ... ನಾನೀಗ ಎಲ್ಲರಿಗಾಗಿ ಬದುಕಬೇಕು ಇವನಿಗೆ ಸೆರಗು ಹಾಸಿ. ಆ ಮೇಲೆ... ಮೇಲೆ... ಮೇಲೆ... ಇದ್ದೇ ಐತೆ ಗಂಗೊಳ್ಳಿ ಹೊಳೆ ಮಡ್ಲು! ಹೌದು ಅದೇ ಸರಿ ಅದೇ ಸರಿಯಾದ ದಾರಿ... ನನ್ನ ಪಾಲಿಗೆ ಉಳಿದರೋ ದಾರಿ!" (ಅದೇ ಪುಟ 197) ಹೀಗೆ ಇಲ್ಲಿ ಚೆಲ್ವಿ ದೇಶ ರಕ್ಷಣೆಗಾಗಿ ತನ್ನ ಶೀಲವನ್ನೇ ತ್ಯಾಗ ಮಾಡುತ್ತಾಳೆ. ಹೀಗೆ ಸ್ವಾತಂತ್ರ್ಯ ಹೋರಾಟದಲ್ಲಿ ನಡೆದ ಘಟನೆಯೊಂದನ್ನು ಆಧರಿಸಿದ ರಚನೆ ಇದು. ಸಾಮಾನ್ಯ ಜನರೂ ದೇಶಕ್ಕಾಗಿ ಅಸಮಾನ್ಯ ತ್ಯಾಗ ಮಾಡಿರುವುದನ್ನು ಇಲ್ಲಿ ಕಾಣಬಹುದಾಗಿದೆ.

'ಬಿಡುಗಡೆಯ ಬೆಳಕೆ' ರೂಪಕದಲ್ಲಿ ಕನ್ನಡದ ಸ್ವಾತಂತ್ರ್ಯ ಹೋರಾಟಗಾರರು, ಸಂಗೊಳ್ಳಿರಾಯಣ್ಣ, ಕಿತ್ತೂರು ಚೆನ್ನಮ್ಮ, ಕುಂಡಲಿನಿ ಭಾರತದ ಕಟ್ಟಬೊಮ್ಮನ್, ಬ್ಯಾನರ್‌ಮನ್, ಝಾನ್ಸಿರಾಣಿ, ನೇತಾಜಿ, ವಿವೇಕಾನಂದ ಹೀಗೆ ಎಲ್ಲಾ ಮುಖ್ಯವಾದವರು ಈ ನಾಟಕದಲ್ಲಿ ಕಾಣಿಸಿಕೊಳ್ಳುತ್ತಾರೆ. ಜೊತೆಗೆ ಇಡೀ ಭಾರತದ ಸ್ವಾತಂತ್ರ್ಯಕ್ಕೆ ಹೋರಾಡಿದ ಎಲ್ಲಾ ನಾಯಕರು ಇಲ್ಲಿ ನೆನಪಿಸಿ–ಕಾಣಿಸಿಕೊಳ್ಳುತ್ತಾರೆ.

ಭಾರತ ಸ್ವಾತಂತ್ರ್ಯದ ಸಂದರ್ಭವನ್ನು ಅನಾವರಣಗೊಳಿಸಿದ್ದಾರೆ. ಮೈಮರೆತು ಮಲಗಿರುವ ಗುಲಾಮತನದಲ್ಲಿಯೇ ಜೀವಿಸುತ್ತೇನೆನ್ನುವ ಭಾರತೀಯನನ್ನು ಬಡಿದೆಬ್ಬಿಸುವ ಮಹಾತ್ಮರು ಹತ್ತಿಸಿಟ್ಟ ಈ ಸ್ವಾತಂತ್ರದ ಹಣತೆ ಸದಾ ಬೆಳಗುತ್ತಿರಲಿ. ಆ ಬೆಳಕಿನಲ್ಲಿ ಭಾರತೀಯನ ಬದುಕು ಬಂಗಾರವಾಗಲಿ ಸ್ವಾತಂತ್ರ್ಯ ಜ್ಯೋತಿಯು ಸ್ವತಂತ್ರವಾಗಿ ಪ್ರೀತಿ ತುಂಬಿರಲಿ ಎಂದು ಯುವ ಜನತೆಗೆ ಸಾ.ಶಿ.ಮರವರು ಕರೆಕೊಟ್ಟಿದ್ದಾರೆ.

'ಉಲ್ಲಾಳದ ರಾಣಿ' ರೂಪಕದಲ್ಲಿ ಪೋರ್ಚುಗಿಸರನ್ನು ಗೋವೆಯಿಂದ ಓಡಿಸಬೇಕು ಎಂದು ತೀರ್ಮಾನಿಸಿ ಯುದ್ದಕ್ಕೆ ಹೋದ ಸಂದರ್ಭದಲ್ಲಿ ಅಬ್ಬಕ್ಕ ತನ್ನ ಸೈನಿಕರಿಗೆ

ಧೈರ್ಯ ತುಂಬುತ್ತಾಳೆ. ಕಾಮರಾಜನ ಜೊತೆಯಲ್ಲಿ ಬಂದಿದ್ದ ಪರಂಗಿಗಳು ಮುತ್ತಿಗೆ ಹಾಕಿದಾಗ ಅಂತಿಮವಾಗಿ ಅಬ್ಬಕ್ಕ ಹೀಗೆ ಹೇಳುತ್ತಾಳೆ.

"...... ಹೋಗಿ ಬರುವೆ. ನನ್ನ ಕನ್ನಡಿಗರೇ
ನೀವೆಲ್ಲ ಬೀಳ್ಕೊಡಿರಿ ಪಾಪಕ್ಕೆ ಪ್ರೋತ್ಸಾಹ ನೀಡದಿರಿ ನೀವು
ಹೋಗಿಬರುವೆ ಹೋಗಿ ಬರುವೆ
ಓಂ ಶಾಂತಿ ಶಾಂತಿ ಓಂ..." (ಸಾ.ಶಿ.ಮ ನೃತ್ಯರೂಪಕಗಳು ರಾಗಿಣಿ ಪ್ರತಿಷ್ಠಾನ ಬೆಂಗಳೂರು 1996 ಪುಟ 428)

ವೀರ ಮಹಿಳೆ ಅಬ್ಬಕ್ಕನ ಚರಿತ್ರೆಯನ್ನು ಕವಿ ನಾಡಿನ ಜನತೆಗೆ ಕಣ್ಣಿಗೆ ಕಟ್ಟುವಂತೆ ತಿಳಿಸಿದ್ದಾರೆ.

'ವೀರ ಭಾರತಿ' ಭಾರತದ ಪೌರುಷ ಪರಂಪರೆಯ ಪ್ರದರ್ಶನ ಲೇಖಕರ ರೂಪಕದಲ್ಲಿವೆ. ಗ್ರೀಕ್ ರಂಗಭೂಮಿಯ ಮಾದರಿಯಲ್ಲಿ ರೂಪಗೊಂಡ ವೀರಭಾರತಿ ಭಾರತದ ಪೌರುಷ ಪರಂಪರೆಯನ್ನು ಪ್ರದರ್ಶಿಸಲು ರೂಪಿತಗೊಂಡಿರುವ ರೂಪಕ. ಇದರಲ್ಲಿ ಭಾರತದ ಧರ್ಮಶಾಸ್ತ್ರದ ಪಿತಾಮಹ ಮನುವಿನಿಂದ ಹಿಡಿದು ಸ್ವಾತಂತ್ರ್ಯ ಭಾರತದ ನಿರ್ಮಾತೃಗಳವರೆಗೆ ಸುಂದರ ಪುರುಷ ಸಾಮ್ರಾಜ್ಯವನ್ನು ಕಟ್ಟಿಕೊಟ್ಟಿದ್ದಾರೆ.

ಕವಿಯು ಬೆಳಕನ್ನು ಪ್ರೀತಿಯಿಂದ 'ಬಾ ಬೆಳಕೆ, ಬಾ..... ಭರತ ಪುತ್ರನಲಿಂದು ನಿರ್ದಯವ ಬಿತ್ತು ಬಾ' ಎಂದು ಕರೆಯುವ ಬೆಳಕಿನ ಕವಿ ನಾ ಭಾರತೀಯನೆಂಬ ತಾರಕ ಮಂತ್ರವನ್ನು ಪ್ರತಿಯೊಬ್ಬ ಭಾರತೀಯನು ಜಪಿಸುವಂತೆ ಮಾಡಬೇಕೆಂಬುದುವಿಶಿಷ್ಠ ಗುಣವಾಗಿದೆ.

ಈ ಶಕ್ತಿಯನ್ನು ಆಧುನಿಕ ಭಾರತೀಯನು ಮೈಗೂಡಿಸಿಕೊಳ್ಳಬೇಕಾಗಿದೆ. ಯುದ್ದಕ್ಕೆ ಹೊರಟ ಶಿವಾಜಿಯು ತನ್ನ ಸೈನಿಕರಿಗೆ "ನೀವು ಮೆರೆಯಲಿ ಇಲ್ಲವೇ ಮಡಿಯಲಿ ಎಲ್ಲವೂ ನಿಮ್ಮ ರಾಷ್ಟ್ರಕ್ಕಾಗಿ ಎಲ್ಲದು ಭಾರತ ಮಾತೆಯ ಪ್ರಗತಿಗಾಗಿ...... ನಿಮ್ಮೆಲ್ಲರ ಬೆಂಬಲವಿದ್ದುದ್ದಾರೆ. ಈ ಪುಂಡ ಯುವಜನರ ಕುರುಹೇ ಈ ಭಾರತದಲ್ಲಿ ಇಲ್ಲದಂತಾಗಿಸುತ್ತೇನೆ." (ಅದೇ ಪುಟ 492) ಎಂದು ಯುದ್ಧಕ್ಕೆ ನಡೆಯುತ್ತಾನೆ. ಅಲ್ಲಿ ಗೆರಿಲ್ಲಾ ಯುದ್ದದ ಮಾದರಿಯನ್ನು ಶಿವಾಜಿಯು ಅಳವಡಿಸಿದ ಭಾರತದ ಹೆಮ್ಮೆಯ ಪುತ್ರನಾದ ಶಿವಾಜೀ ಮಾರಾಠ ದೊರೆ ಅಷ್ಟೇ ಅಲ್ಲ..... ಇಡೀ ದೇಶದ ಕೆಚ್ಚದೇಯ ರಾಜ ಶಿವಾಜೀಯ ಹೋರಾಟ ಸಾಹಸಗಳು ನಂತರ ರಾಜರುಗಳಿಗೆ ಪ್ರೋತ್ಸಾಹಕವಾಗಿದ್ದು ಶಿವಾಜಿಯ ವ್ಯಕ್ತಿತ್ವವನ್ನು ರೂಪಕದ ಮೂಲಕ ಶಿವಾಜಿಯು ನಂಬಿದ ಮೌಲ್ಯಗಳನ್ನು ಸಭಿಕರಿಗೆ ಪರಿಚಯಿಸುವ ಹಾಗೂ ದಕ್ಷತೆ ಚಾಣಾಕ್ಷತೆಯನ್ನು ತಮ್ಮಲ್ಲೂ ಅಳವಡಿಸಿಕೊಳ್ಳಲು ಸಂದೇಶ ಸಾರುವಂತೆ ಸಾ.ಶಿ.ಮ ಅವರು ರೂಪಕದಲ್ಲಿ ನಿರೂಪಿಸಿದ್ದಾರೆ.

ಮೈಸೂರು ಹುಲಿ ಎಂಬ ಪಾತ್ರಕ್ಕೆ ಪಾತ್ರನಾಗಿದ್ದ ಟಿಪ್ಪುಸುಲ್ತಾನ. ಭಾರತೀಯ ಉಗ್ರ ಸ್ವಾತಂತ್ರ ಪ್ರೇಮಿ...... ಆಶಾವಾದಿಯು ಹೌದು. ಹೋರಾಟಕ್ಕೆ ಅಣಿಯಾಗಿದ್ದ ಟಿಪ್ಪು ಶ್ರೀರಂಗನಾಥನಲ್ಲಿಗೆ ಹೋಗಿ "ರಂಗ...! ಶ್ರೀರಂಗ ಆದೀಶೇಷಷಯನಾಗಿ ಭೂದೇವಿ ಶ್ರೀದೇವಿಯರೊಡನೆ ಆಡುವ ಚಕಂದ ಬಿಟ್ಟು ಇದೊಂದು ದಿನ ರಣಭೂಮಿಗೆ ಬಾ ಸ್ವಾಮಿ... ನಿನ್ನ ನಲ್ಗುರುವನ ವೀರೋತ್ಸಾಹಸದ ಹೋರಾಟವನ್ನು ಕಣ್ಣ್ತುಂಬ ನೋಡಿ ಆನಂದಿಸುವಂತೆ! ನಾನೇ ಗೆಲ್ಲುವೆನೆಂಬ ಭ್ರಮೆ ನನಗಿಲ್ಲಾ ರಂಗನಾಥ...... ಸೋಲು ಗೆಲುವುಗಳು ನಿನ್ನದೀನ......! ಆದೋಡೆ ಪ್ರಯತ್ನ ನನ್ನದು ಅದನ್ನು ನೋಡಿ ಆನಂದಿಸುವೆಯಂತೆ ಬಾ ತಂದೆ'...... ಎನ್ನುವ ವೀರನ ವಿನಯವಂತಿಕೆ ತ್ಯಾಗ ಮನೋಭಾವ ರಾಷ್ಟಾಭಿಮಾನ ಸರ್ವಧರ್ಮ ಸಮನ್ವಯತೇ ಮನ ಮುಟ್ಟುತ್ತದೆ. 'ಅಮ್ಮ ಕಾವೇರಿ...... ಇದೊಂದು ದಿನ ನನ್ನ ಮನ್ನಿಸು ತಾಯಿ ನಿನ್ನ ಪವಿತ್ರ ಪಾತ್ರದಲ್ಲಿ ಪಾಶ್ಚಾತ್ಯ ಪಶುಗಳ ಕ್ಷತ–ವಿಕ್ಷತವಾದ ದೇಹರಾಶಿಯನ್ನೊಟ್ಟಿ ಅಡಕಟ್ಟಿಹಾಕುತ್ತೇನೆ!..... ನಿನ್ನ ಪಾವನಸಲಿಲ ರಕ್ತಮಯವಾಗಿ ನೊರೆತುಂಬಿ ಹರಿದೀತೂ" (ಅದೇ ಪುಟ 492) ಎಂದು ಯುದ್ಧದ ಸ್ಥಿತಿಯನ್ನು ಸೂಚಿಸಿದ ಟಿಪ್ಪು ತನ್ನ ಧರ್ಮ ದೈವವಾದ ಅಲ್ಲಾಹೂನಲ್ಲೂ ದಿಗ್ವಿಜಯ ಕೋರಿ ಸ್ಮರಿಸುತ್ತಾನೆ. ಇಲ್ಲಿ ಮರುಳಯ್ಯನವರು ದರ್ಮದೇವರನ್ನು ಮೆಟ್ಟನಿಂದ ರಾಷ್ಟ್ರಪ್ರೇಮವನ್ನು ಟಿಪ್ಪುವಿನಲ್ಲಿ ಕಂಡಿದ್ದಾರೆ.

ಕಿತ್ತೂರ ರಾಣಿ ಚನ್ನಮ್ಮನಂತೆ ಹಲವಾರು ದೇಶ ಭಕ್ತರು ರಾಷ್ಟ್ರ ಸೇವೆಗಾಗಿ ತಮ್ಮ ಜೀವನವನ್ನೆ ಮುಡಿಪಾಗಿಟ್ಟು ಹೋರಾಡಿದವರು. ರಾಷ್ಟ್ರ ವೀರತೆ, ದೇಶ ಭಕ್ತಿ, ಸ್ವಾತಂತ್ರ್ಯ ಪ್ರೇಮ ನಾಡಿನ ಪ್ರತಿಯೊಬ್ಬರಿಗೂ ಆದರ್ಶವಾಗಿರಬೇಕು.

ರಾಷ್ಟ್ರವೀರ ಪಾಂಡ್ಯ ಅರಸ ತನ್ನ ಮರಣದ ಸಂದರ್ಭದಲ್ಲಿ "ಮಿಂಚಿಹೋದದಕ್ಕೆ ಚಿಂತಿಸಬೇಡಿ ನನ್ನ ಸಾವಿಗಾಗಿ ಮೊರಗುತ್ತಿಲ್ಲಾ..... ಸ್ವತಂತ್ರ ರಾಜ್ಯದ ಕನಸು ಕಂಡಿದ್ದೆ. ಅದು ಈಡೇರದ ಭಾವನೆ ಕಾಡುತ್ತಿದೆ. ನಾನು ಸತ್ತರೆ ನನ್ನ ದೇಹ ದೂರವಾಗುತ್ತದೆ. ಆದರೆ ನನ್ನ ಆತ್ಮ ಇಲ್ಲಿಯೆ ಇರುತ್ತದೆ..... ನೀವು ವಿಮುಖರಾಗದೆ ಹೋರಾಡಿ ನಾನು ಇನ್ನೇಷ್ಟು ಜನ್ಮಗಳನ್ನೆತ್ತಿದರು ಇಡೀ ಪಾಂಚಾಲಾ ಕುರಿಚ್ಚೇಯ ಮಣ್ಣಿನಲ್ಲಿಯೇ ಹುಟ್ಟುತ್ತೇನೆ" (ಅದೇ ಪುಟ 505) ಎಂದು ಹೇಳಿ ಅಮರನಾಗುತ್ತಾನೆ. ಇಲ್ಲಿ ಸಾ.ಶಿ.ಮ ರವರು ವೀರಯೋಧನ ಪರಿಚಯ ಮಾಡುವ ಮೂಲಕ ರಾಷ್ಟ್ರಭಕ್ತನ ಆದರ್ಶ ಹೆಜ್ಜೆಗಳಲ್ಲಿ ಯುವಜನತೆ ಸಾಗುವಂತಹ ಸಂದೇಶವನ್ನು ರೂಪಕದ ಮೂಲಕ ಪರಿಚಯ ಮಾಡಿಕೊಟ್ಟಿದ್ದಾರೆ. ಭಾರತೀಯ ಇತಿಹಾಸ ಪರಂಪರೆಯಲ್ಲಿ ಅಚ್ಚಳಿಯದ ಹೆಸರು ರಾಣಿ ಲಕ್ಷ್ಮೀಬಾಯಿ. 'ದತ್ತುಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯ ವಿರುದ್ಧ ಪ್ರತಿಭಟಿಸುವ ಮೂಲಕ ಸೋಲು–ಗೆಲುವು ಮುಖ್ಯವಲ್ಲ. ಸ್ವಾರ್ಥಬದಿಗಿಟ್ಟು ಹೋರಾಟ ಮಾಡಿ. ಭರತ ಖಂಡದ ಇತಿಹಾಸ ಅನ್ಯರ ಕೈಯಲ್ಲಿ ನೆಲೆಸದಿರಲಿ ನನ್ನ ನಾಡನ್ನು ಬ್ರಿಟಿಷರ ಕೈವಶ ಮಾಡಬೇಡಿ. ಇದು ಎಂದಿಗೂ ನನ್ನ ರಾಜ್ಯ, ನನ್ನ ದೇಶ ಎಂಬ ಅವಳ ಮಾತುಗಳು ಹೋರಾಟದ ದಿಕ್ಕನ್ನೇ ಬದಲಿಸುತ್ತವೆ.

ಕ್ರಾಂತಿಕಾರಿ ಭಗತಸಿಂಗ್ ಬಹುಬೇಗಾ ಸತ್ತು ಇದೆ ಭರತ ಭೂಮಿಯಲ್ಲಿ ಮತ್ತೆಮಗುವಾಗಿ ಜನಿಸಬೇಕು. ಆದರೆ ಇಂತಲ್ಲ ಹೊಸರಕ್ತದಿಂದ ಹೊಸ ದೇಹದಿಂದ ಹೊಸ ಹುರುಪಿನಿಂದ ಅಂದು ಸ್ವಾತಂತ್ರ್ಯ ಹೋರಾಟದಲ್ಲಿ ಜಯಗಳಿಸಿ ಸ್ವಾತಂತ್ರ್ಯ ಪುತ್ರನಾಗಬೇಕೆಂದು ಎಂದು ಭಾರತ ಭೂಮಿ ಸ್ವತಂತ್ರ ಭೂಮಿಯಾಗಿ ತೋರಬೇಕು ಎಂಬ ಮನಸಿನ ವ್ಯಕ್ತಿ ಅನ್ಯಾಯ ದಾಸ್ಯಗಳ ವಿರುದ್ದ ಸದಾ ಹೋರಾಡುವ ಮನೋಭಾವದ ವ್ಯಕ್ತಿಗಳು ಪ್ರಸ್ತುತ ಭಾರತದಲ್ಲಿ ಅತ್ಯಗತ್ಯವೆಂಬುದನ್ನು ಕವಿ ಸಾಶಿಮರವರು ತಿಳಿಸಿದ್ದಾರೆ. "ಮಿತ್ರರೇ ನಾವಿನ್ನು ದಾಸರಾಗಿ ಉಳಿಯಲಾರೆವೂ ದಾಸ್ಯದ ಸವಿಯನ್ನು ನಾವೂ ಸವಿದಿದ್ದೇವೆ. ವಿದೇಶಿಯ ಆಕ್ರಮಣಕಾರರಿಂದ ಮಾತೃಭೂಮಿಯನ್ನು ಉಳಿಸುವುದಕ್ಕಾಗಿ ಜಗತ್ತಿನಲ್ಲಿಯೇ ಹೆಚ್ಚು ಬಲಶಾಲಿಯಾದ ಸೇನೆಯನ್ನು ಸಂಘಟಿಸುವುದು. ನಿಮ್ಮ ಕರ್ತ್ಯವಾಗಿದೆ. ಯೋಗ್ಯತೆ ಸಾಮರ್ಥ್ಯಗಳು ಜೊತೆಯಾಗಿರುವವರೆಗು ಭಾರತೀಯ ಯೋಧನು ಯಾರಿಗೂ ಹಿಂದಿಲ್ಲವೆಂದು ನಾನು ಜಗತ್ತಿಗೆ ತೋರಿಸಿಕೊಡುತ್ತೇನೆ. ಸ್ವಾತಂತ್ರ್ಯವೆನ್ನುವುದು ಎಂದಿಗೂ ದಾನದಿಂದ ಪಡೆಯುವ ವಸ್ತುವಲ್ಲ. ಅದಕ್ಕೆ ನೆತ್ತರಿನ ಬೆಲೆ ಕೊಟ್ಟುಕೊಳ್ಳಬೇಕಾಗುತ್ತದೆ. ಆದ್ದರಿಂದ ರಕ್ತದಾನ ಮಾಡಬನ್ನಿ. ದೇಶ ಸೇವೆಗೆ ಬಂಧು ರಕ್ಷಣೆ" (ಅದೇ ಪುಟ 516) ಎನ್ನುವ ವೀರ ಸಂದೇಶ ನೀಡಿದ ಸುಭಾಷಚಂದ್ರ ಭೋಸ್‌ರು ಸ್ವಾತಂತ್ರ್ಯ ಹೋರಾಟಕ್ಕೆ ಬೇಕಾದ ಯುವ ಜನತೆಯನ್ನು ರೂಪಿಸುತ್ತಿದ್ದ ಶಿಸ್ತು ಕ್ರಮವನ್ನು ಲೇಖಕರು ಮನವರಿಕೆ ಮಾಡಿಕೊಟ್ಟಿದ್ದಾರೆ. "ಮಿತ್ರರರೇ ನಿಮ್ಮ ಹೊಣೆಗಾರಿಕೆ ಇಂದು ಈ ತುರ್ತು ಪರಿಸ್ಥಿಯಲ್ಲಿ ಗುರುತರವಾದದ್ದು. ಯುದ್ದಾಗ್ನಿಯಲ್ಲಿ ನಮ್ಮ ವೀರ ಯೋಧರು ಮಡಿದು. ಕ್ಷಾಮ ಚಿತೆಯಲ್ಲಿ ಬಡವರೆಲ್ಲಾ ನಾಶ ಹೊಂದಿದರೆ ನಿಮ್ಮ ಭವಿಷ್ಯ ಏನಾಗಬಹುದೆಂದು. ಸ್ವಲ್ಪ ಯೋಚಿಸಿ ನೋಡಿ" (ಅದೇ ಪುಟ 519) ಎಂಬ ಮಾತುಗಳು ಇಂದಿನ ಯುವಜನತೆಗೆ ಮಾರ್ಗದರ್ಶನವಾಗಿದೆ ಎಂದು ಸಾ.ಶಿ.ಮರವರು ಅಭಿಮತವಾಗಿದೆ.

ಚಿತ್ತರಂಜನ ದಾಸ ಅವರು ಹೇಳುವಂತೆ "ದಬ್ಬಾಳಿಕೆಯ ಆಳ್ವಿಕೆಯನ್ನು ಪ್ರತಿಯೊಬ್ಬ ಭಾರತೀಯನು ಎದುರಿಸಬೇಕಿದೆ. ಭಾರತದ ಪ್ರಗತಿ ಸ್ವರಾಜ್ಯದಲ್ಲಿ ಅಡಗಿದೆ." (ಅದೇ ಪುಟ 523) ಎನ್ನುವ 'ವೀರಭಾರತಿ' ರೂಪಕವೂ ಭಾರತದ ಪುಣ್ಯ ಪುರುಷರ ಹಾಗೂ ಸ್ವಾತಂತ್ರ್ಯ ಹೋರಾಟಗಾರರ ವಿಜಯ ವೈಭವವನ್ನು ಪ್ರಸ್ತುತ ಪಡಿಸಿದೆ. ಪ್ರತಿಯೊಬ್ಬ ನಾಯಕರ ಇಡೀ ಜೀವನವನ್ನು ಒಂದು ಕ್ಷಣದಲ್ಲಿ ಕಣ್ಣ ಮುಂದೆ ತಂದು ನಿಲ್ಲಿಸುತ್ತದೆ. ಅವರ ತ್ಯಾಗ ಬಲಿದಾನ ಹೋರಾಟ ದೇಶ ಭಕ್ತರ ಚಿತ್ರಣಗಳು ಇಲ್ಲಿ ಅನಾವರಣಗೊಂಡಿವೆ. ಪವಿತ್ರ ಭೂಮಿಯ ಪುಣ್ಯ ಪುರುಷರು ಇವರು ಭೂಮಿಯ ರಕ್ಷಕರಾಗಿ ನಾಯಕರಾಗಿ ಜನಮನದಲ್ಲುಳಿದಿದ್ದಾರೆ. ಇಂತಹ ವ್ಯಕ್ತಿತ್ವಗಳನ್ನು ಆರಾಧನೆ ಮಾಡದಿದ್ದರೂ. ಅವರ ಚರಿತ್ರೆಗಳನ್ನು ಮನನ ಮಾಡಿಕೊಳ್ಳುವ

ಮೂಲಕ ಉತ್ತಮ ಮಾರ್ಗದಲ್ಲಿ ಸಾಗುವ ಜವಾಬ್ದಾರಿ ಮುಂದಿನ ಪೀಳಿಗೆಯ ಮೇಲಿದೆ ಎನ್ನುವುದನ್ನು ಸಾ.ಶಿ.ಮರವರು ಕುರಿತು ಈ ರೂಪಕದಲ್ಲಿ ಸ್ಪಷ್ಟವಾಗಿ ಚಿತ್ರಿಸಿದ್ದಾರೆ.

'ಯೇಸು ಬಂದ ಧರೆಗೆ' ರೂಪಕದಲ್ಲಿ,

ಯೇಸು : ನನ್ನ ಮೇಲಿನ ಅಭಿಮಾನದಿಂದ
ನನ್ನನ್ನು ನಿಮ್ಮಿಂದ ಬಹುದೂರ ಇರಿಸದಿರಿ
ನಾನು ನಿಮ್ಮವ ನಾನು ನಿಮ್ಮವ ನಿಮ್ಮಲ್ಲಿ ಒಬ್ಬಕೂಡ
ನಾವೆಲ್ಲರೂ ಒಬ್ಬ ದೇವನ ಮಕ್ಕಳು" (ಅದೇ ಪುಟ 214)

ಎಂದು ಹೇಳುತ್ತಾ ಯೇಸು ಕೊಲ್ಲುವದಕ್ಕಿಂತಲೂ ಕ್ಷಮಿಸುವುದು ಹಿರಿಯ ಗುಣ ಎನ್ನುತ್ತಾನೆ. ಅಲ್ಲದೆ ತನ್ನ ಜೀವಿತದಲ್ಲಿ ಕಂಡ ಮಗ್ದಲ ಮೇರಿ ಎಂಬುವಳ ಕತೆಯನ್ನು ಹೇಳುತ್ತಾನೆ.

ಇಂದಿನ ಜಗತ್ತಿನ ಅಶಾಂತಿಯನ್ನು ನೋಡಿದರೆ ಅಹಿಂಸೆ ಹಿಂದಿಗಿಂತಲೂ ಇಂದು ಅಗತ್ಯವಾಗಿದೆ. ಹಾಗೆ ವಿಶ್ವದ ಮೇಲೆ ಮಾನವ ಕುಲ ಇರುವವರೆಗೂ ಅಗತ್ಯ ಎಂದೆನಿಸುತ್ತದೆ. ಅಹಿಂಸೆಗೆ ಮಾನ್ಯತೆ ನೀಡಿದೆ. ಒಬ್ಬ ಯಹುದಿ ಪ್ರವಾದಿ ನನಗೆ ಪಶುಯಜ್ಞಕ್ಕಿಂತಲೂ ಕರುಣೆಯೇ ಹೆಚ್ಚು ಇಷ್ಟು, ಆಹಾರ ಸಂಪಾದನೆಗಾಗಿ ಅನ್ಯರಿಗೆ ಕಷ್ಟವಾಗದ ಒಕ್ಕಲತನವೇ ಮಾಡಬೇಕು ಎಂದು ಹೇಳುತ್ತಾನೆ.

ಕನಸುಗಾರಿಕೆ ಮತ್ತು ಆದರ್ಶ ಪ್ರಿಯತೆಗಳನ್ನೇ ಸ್ಥಾಯಿಯಾಗಿ ಪಡೆದ ಈ ಮೇಲಿನ ಪದ್ಯ ತನ್ನ ಕಾವ್ಯದ ಮೂಲಕ ವಾಚಕನ ಮೇಲೆ ಪರಿವರ್ತನಾ ಪ್ರಭಾವವನ್ನು ಬೀರಲು ಪ್ರಯತ್ನಿಸುತ್ತಿದೆ. ಜೀವನದಲ್ಲಿ ಒಲವಿನ ಆದರ್ಶವೊಂದು ಬಿಚ್ಚಿಕೊಳ್ಳುವ ಪರಿ ಅದ್ಭುತವಾದದ್ದು. ಪ್ರೀತಿ ಮತ್ತು ಬಡತನ ಇಲ್ಲಿ ಮುಖ್ಯವಾಗಿ ಬಂದ ಅಂಶಗಳಾಗಿವೆ. ದಾಂಪತ್ಯ ಒಲವು ನಿರಂತರವಾಗಿದ್ದರೆ ಸಾಕು ಅದಕ್ಕೆ ಬಡತನದ ಬಿಸಿ ತಾಗಲು ಇಂತಹ ಜೀವನ ಮೌಲ್ಯವನ್ನು ಪ್ರತಿಪಾದಿಸುವ ಕಾವ್ಯ ಶಕ್ತಿಯನ್ನು ಪಡೆದ ಸಾಶಿರವರು ಅದರ ವಿಸ್ತಾರ ರೂಪವನ್ನು ನೀಡುತ್ತಾರೆ

ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣಿನ ಸ್ಥಾನಮಾನ ಬಹುದೊಡ್ಡದು. ಭವ್ಯ ಪರಂಪರೆಯೇ ಇದೆ. ಪೌರಣಿಕ ಚಾರಿತ್ರಿಕವಾಗಿ ಪಠ್ಯ ಹಾಗೂ ಐಹಿತ್ಯಗಳಲ್ಲಿ ಹೆಣ್ಣಿನ ಸ್ಥಾನ – ಮಾನಗಳ ಕುರಿತು ಅಪಾರವಾದ ಗೌರವಾಧರಗಳನ್ನು ಕಾಣಬಹುದಾಗಿದೆ. ಆದರೆ ಕಾಲಾನುಕ್ರಮದಲ್ಲಿ ಹಲವು ಕಾರಣಗಳಿಂದ ಚಾರಿತ್ರಿಕವಾಗಿ ಹೆಣ್ಣಿನ ಸುತ್ತ ಕಾಣದ ಕೈಯಿಗಳಿಂದ ಅಘೋಷಿತ ನಿರ್ಬಂಧನೆ ಆರಂಭವಾಗ ತೊಡಗಿತು. ಪ್ರಮುಖವಾಗಿ ರಾಜಕೀಯ ಕಾರಣಗಳು ಹೆಣ್ಣಿನ ಸುತ್ತ ನಿರ್ಬಂಧಗಳು ಸೃಷ್ಟಿಯಾಗಲು ಕಾರಣವಾಯಿತು. ರಾಜಕೀಯ, ಸಾಂಸ್ಕೃತಿಕ, ಸಾಮಾಜಿಕ ಮಾನ್ಯತೆ ಪಡೆಯುತ್ತ ಸಾಗಿದ ಸ್ತ್ರೀಯ ಕುರಿತು ಆಧುನಿಕ ಸಮಾಜದವರಿಗೆ ಹರಡಿಕೊಂಡು ಬಂದ ನಿರ್ದಶನಗಳನ್ನು ಕಾಣಬಹುದಾಗಿದೆ.

ಹೆಣ್ಣು ಹೊನ್ನು ಮಣ್ಣು ಮಾಯೆಯಲ್ಲ ಆದರೆ ಆ ಮಾಯೆ ಕ್ರಿಯಾರೂಪಕ್ಕೆ ಇಳಿದಾಗ ಹೆಣ್ಣು ಹೊನ್ನು ಮಣ್ಣುಗಳ ರೂಪ ಧರಿಸುತ್ತದೆ. ಮಾಯೆ ಮತ್ತು ಮೋಹ ಅಥವಾ ಸ್ವಾರ್ಥತನ ಇಡೀ ಮನುಕುಲದ ಚರಿತ್ರೆಯಾಗಿ ನಿಲ್ಲುತ್ತದೆ ಎಂಬ ವಾಸ್ತವ ಸತ್ಯವನ್ನು ನಾವು ಗಮನಿಸಬಹುದು, ಇಂತಹ ಚರಿತ್ರೆಯ ಕವಿ ಕವಿಯ ಮನದಲ್ಲಿ ಹೊಸ ತುಡಿತವೊಂದು ಎಳೆಯಾಗಿ ಬಿಚ್ಚಿಕೊಳ್ಳುತ್ತವೆ ಆದರೆ ಅದು ನನಸಾಗುವುದಿಲ್ಲ ಎಂಬ ಭಯ ಕೂಡ ಇದೆ. ಯಾಕೆಂದರೆ ಈ ದೇಶದಲ್ಲಿ ಹಿಂದೆ ನಡೆದ ಮತ್ತು ಇಂದು ನಡೆಯುತ್ತಿರುವ ಮನಸ್ಸುಗಳಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ. ಈ ದೇಶದಲ್ಲಿ ಬರಡು ಬದುಕು ಇದೆ ಅನ್ನ ಅರಿವೆ ಇಲ್ಲದೆ ಬಡತನ ತುಂಬಿಕೊಂಡಿದೆ. ಆಶಾವಾದದ ಬಯಕೆ ಕ್ಷಣ ಹೊತ್ತು ಬಂಗಾರವಾಗುತ್ತದೆ.

ಎರಡನೇ ದೃಶ್ಯದಲ್ಲಿ ಯೇಸು ಮನುಷ್ಯರಿಗೆ ಮನುಷ್ಯತ್ವದ ಬಗ್ಗೆ ಕರೆಯನ್ನುಕೊಡುತ್ತಾ,

"....... ನೀವು ಮನುಷ್ಯರಾಗಿದ್ದೀರಿ.
ಉಪ್ಪೇ ಸಪ್ಪೆಯಾದರೆ! ಅಂದರೆ ನಿಮ್ಮಲ್ಲಿರುವ
ಮನುಷ್ಯತ್ವವನ್ನು ನೀಗಿಕೊಂಡರೆ
ಉಪ್ಪಿನ ರುಚಿಯನ್ನು ಮತ್ತಾವ ವಸ್ತುವಿನಿಂದ
ಕೊಡಲು ಸಾಧ್ಯ?
ಅಂದರೆ
ನಿಮ್ಮಲ್ಲಿಲ್ಲದಾ ಮನುಷ್ಯತ್ವ ಯಾರು ತುಂಬಲು ಸಾಧ್ಯ?
ಆದ್ದರಿಂದ ಏನಾದರೂ ಆಗಿ ಮೊದಲು ಮಾನವನಾಗಿ
ಇದೆ ನಾನು ನಿಮಗಿತ್ತ ಸಂದೇಶ! ನಿತ್ಯದಾದೇಶ!" (ಅದೇ ಪುಟ 216)

ಎಂಬಂತೆ ಅದೃಷ್ಟ–ದುರಾದೃಷ್ಟಗಳು ಮನುಷ್ಯನ ಬದುಕಿನಲ್ಲಿ ಸಾಮಾನ್ಯವಾದವು ಛಲದಿಂದ ಬದುಕನ್ನು ಎದುರಿಸಿ ಗೆಲ್ಲುವ ಆಯ್ಕೆ ನಮ್ಮ ಕೈಯಲ್ಲಿದೆ. ನಿರಾಶೆಯದಲ್ಲಿ ಬೀಳದೆ ಉತ್ತಮ ಮಾನವೀಯತೆಯಿಂದ ಬದುಕನ್ನು ಬದಲಿಸಿಕೊಳ್ಳುವ ಸಾಧಿಸುವ ತಾಳ್ಮೆ ಸಹನೆಗಳ ಅಗತ್ಯವನ್ನು ಈ ಮೇಲಿನ ರೂಪಕವು ಪ್ರತಿಪಾದಿಸುತ್ತದೆ.

ಮೂರನೇ ದೃಶ್ಯದಲ್ಲಿ ಜುಡಾಸ್ ಯೇಸುವನ್ನು ಫೇರಿಸಾಯಿಗಳ ಕೈಗೆ ಒಪ್ಪಿಸುತ್ತಾನೆ. ನಾಲ್ಕನೇ ದೃಶ್ಯ ಗೊಲ್ಗೊಥದ ಶಿಖರ ಮೇಲೆ ನಡೆಯುತ್ತದೆ. ಯೇಸುವನ್ನು ಸಿಲಬೇಗೇರಿಸಿ ಎತ್ತರದಲ್ಲಿ ಎತ್ತಿ...... ನಿಲ್ಲಿಸಿದಾಗ ಅಂತಿಮವಾಗಿ ಹೀಗೆ ಹೇಳುತ್ತಾನೆ...

"ಯೇಸು ತಾಯಂದಿರೆ, ನನಗಾಗಿ ಮರುಗದಿರಿ, ಕಣ್ಣೀರ ಕರೆಯದಿರಿ
ನೀವು ಕಣ್ಣೀರ ಕರೆಯ ದಾಹವಾಗುವುದೆನಗೆ !
ಆ ನೀರ ಕುಡಿಯುವೆನು? ಅದು ಮೇಲೇರದಿಹುದು!
ನೀವು ದುಃಖಿಸೆ ನನಗು ದುಃಖ ಇಮ್ಮಡಿಸುವುದು!
ಸಾಯುವಾತಗೆ ಬೇಕು ಸಾಂತ್ವನದ ನುಡಿಜೇನು
ನೀವು ನಡೆಯಿರಿ ನಿಮ್ಮ ಬಾಳ ತಿರಗೆ
ನಾನು ತೆರಳುವೆ ನನ್ನ ತವರು ಮನೆಗೆ!" (ಅದೇ ಪುಟ 217)

ಎಂಬ ಜೀಸಸ್‌ನ ವ್ಯಕ್ತಿತ್ವ, ಆದರ್ಶಗಳನ್ನು ಅಪೂರ್ವವಾಗಿ ಚಿತ್ರಿಸಿರುವ ಕವಿ, ಆ ಕಾಲದ ಹಿಂಸೆ, ಕ್ರೌರ್ಯ ಆಧುನಿಕ ಯುಗದಲ್ಲಿಯೂ ಹೊಸರೂಪದಲ್ಲಿ ಮುಂದುವರೆಯುತ್ತಿರುವ ದುರಂತವನ್ನು ಕಟ್ಟಿಕೊಟ್ಟಿದ್ದಾರೆ. ಜೀಸಸ್‌ನ ಸಾವನ್ನು ವಿಷಾದದಿಂದ ನೋಡುವ ಕವಿ, ಆತ ಇಂದು ಅಸಂಖ್ಯ ಹೃದಯಗಳಲ್ಲಿ ಮಾನವತೆಯ ಕಿಡಿಯನ್ನು ಹಚ್ಚಿಹೋಗಿರುವ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದ್ದಾರೆ.

ಸಾ.ಶಿ. ಮರುಳಯ್ಯನವರು ಯೇಸುವಿನ ಜೀವನದ ಪ್ರಮುಖ ಘಟ್ಟಗಳನ್ನು ರೂಪಕದ ಮುಂಖಾತರ ಅನಾವರಣಗೊಳಿಸಿದ್ದಾರೆ ಸಾ. ಶಿ. ಮರುಳಯ್ಯನವರ ನೃತ್ಯರೂಪಕಗಳ ಬಗ್ಗೆ ಮಹಾಮಹೋಪಾಧ್ಯಯ ರಾ. ಸತ್ಯನಾರಾಯಣ ಹೀಗೆ ಅಭಿಪ್ರಾಯ ಪಡುತ್ತಾರೆ. ಒಟ್ಟಿನಲ್ಲಿ ಈ ನೃತ್ಯರೂಪಕಗಳು ಕನ್ನಡನಾಟಕ ಕ್ಷೇತ್ರದಲ್ಲಿ ಒಂದು ಒಳ್ಳೆಯ ಪ್ರಾಯೋಗ, ಶಾಸ್ತ್ರೀಯ ಪರಿಸರದ ಹೊರಗೆ ವೃತ್ತ ನೃತ್ಯಗಳನ್ನು ಅಳವಡಿಸುವುದರ ಬಗೆಗೆ ಚಿಂತನೆಯನ್ನು ಪ್ರೇರೆಪಿಸಿ ರಂಗಾನ್ವಯದಲ್ಲಿ ತೊಡಗಿಸುತ್ತವೆ. ನೃತ್ಯ ನಾಟಕ ನಿರ್ಮಾಣದ ವಿಷಯದಲ್ಲಿ ಮೇಲೆ ಹೇಳಿರುವ ವಿಷಯಗಳನ್ನು ಮೈಗೂಡಿಸಿಕೊಂಡರೆ ಕನ್ನಡ ರಂಗಭೂಮಿಗೆ ಒಂದು ಧೀರ್ಘಕಾಲದ ಕೊಡುಗೆಯಾಗುವುದರಲ್ಲಿ ಸಂದೇಹವಿಲ್ಲ.

ವಿಶ್ವಮಾನವ ಬಸವಣ್ಣ – ಇಲ್ಲಿ 12ನೇ ಶತಮಾನ ಮಹಾನ್ ವಿಶ್ವಚೇತನ ಶಕ್ತಿ ಬಸವಣ್ಣನನ–ತತ್ವ–ವೈಚಾರಿಕತೆಯನ್ನು ಬಿಂಬಿಸುತ್ತದೆ. ಮನೆಯೊಳಗಣ ಕಿಚ್ಚು–ಹೊಯ್ಸಳ ರಾಜ ವಿಷ್ಣುವರ್ಧನ ರಾಣಿಯರ ನಡುವಿನ ಒಳಜಗಳ ಕಥಾವಸ್ತು. ಯೇಸು ಧರೆಗೆ–ಯೇಸು ಕ್ರಿಸ್ತನ ಕಥೆಯಾಗಿದೆ. ಬಸವಣ್ಣ

ಬಂದನೋ–ಕ್ರಾಂತಿಕಾರಿ ಬಸವಣ್ಣನ ಜೀವನ, ನಾಟ್ಯ ಸರಸ್ವತಿ–ನಾಟ್ಯರಾಣಿ ಶಾಂತಲೆಯ ಮೇಲೆ ರಚಿಸಿದ ರೂಪಕವಾಗಿದೆ.

ಡಾ. ಮರುಳಯ್ಯನವರು ಸೃಜನಶೀಲರೂ ಪ್ರಗತಿಶೀಲರೂ ಆಗಿರುವ ಸಾಹಿತಿ, ಅವರು ಸಾಹಿತ್ಯದ ಹಲವು ಪ್ರಕಾರಗಳ ನೂತನ ರಚನೆಗಳನ್ನು ಮಾಡಿದ್ದಾರೆ. ಅವರ ಸ್ನೋವೈಟ್, ಪೃಥಾಪವಿತ್ರ, ಮನೆಯೊಳಗಣ ಕಿಚ್ಚು, ಅಂಬೆ, ಬಸವಣ್ಣ ಬಂದಾನೋ, ಬನವಾಸಿ, ಬಾದಾಮಿ, ಉಡುಪಿ, ಚೆನ್ನಿಚೆನ್ನಿ ಚೆನ್ನಲೆ, ತಥಾಗತ –ಬುದ್ಧದೇವ ಎಂಬ ಹತ್ತು ನೃತ್ಯ ರೂಪಕಗಳನ್ನು ನಾನು ಓದಿ ಸಂತೋಷಪಟ್ಟಿದ್ದೇನೆ. ಇವುಗಳಲ್ಲಿ ಮೊದಲನೆಯದು ಗ್ರಿಮ್ಸ್ ಸೋದರರ ಅದೇ ಹೆಸರಿನ ಕಾಲ್ಪನಿಕ ಶಿಶು ಕಥಾನಕ, ಫೇರಿ ಟೇಲ್ ಎರಡನೆಯದು ಮಾಹಾಭಾರತದ ಕುಂತಿಯನ್ನು ಕುರಿತ ಶ್ರೀ ಶಂಕರಪಿಳ್ಳೆಯವರ ರೂಪಕದಿಂದ ಪ್ರೇರಿತವಾದುದು, ನಾಲ್ಕನೆಯದೂ ಮಹಾಭಾರತದ ಅಂಬೆಯನ್ನು ಕುರಿತು ಸ್ವತಂತ್ರರೂಪಕ, ಉಳಿದವುಗಳು ವರಿತ್ರಕ ಕಥಾನಕಗಳನ್ನು ಆಧರಿಸಿದ ರೂಪಕಗಳು ಎಲ್ಲದರಲ್ಲಿಯೂ ಹಿಂದೂ ಸಂಸ್ಕೃತಿಯಲ್ಲಿ ಅಭಿವ್ಯಕ್ತಿಗೊಂಡ ಸಾಮಾಜಿಕ ನೀತಿ ಅಥವಾ ಆದರ್ಶದ ಸಂದೇಶವಿದೆ, ಕಾವ್ಯೋದಯಕ್ಕೆ ಹೇತುವಾದ ಒಂದು ಸಂಘರ್ಷವಿದೆ. ಇದರ ನಿರೂಪಣೆ, ವಿಶ್ಲೇಷಣೆ ಮತ್ತು ಪರಿಹಾರಕ್ಕಾಗಿ ರೂಪಕಗಳು ಹುಟ್ಟಿಕೊಂಡಿವೆ. ಇವುಗಳಲ್ಲಿ ಕೆಲವಕ್ಕೆ ಈಗಾಗಲೇ ರಂಗಸ್ಥಲದಲ್ಲಿ ಯಶಸ್ವಿ ಪ್ರಯೋಗವು ನಡೆದಿದೆ.

ನಿಸರ್ಗ ಮನುಷ್ಯನಿಗೆ ಎಷ್ಟು ಮುಖ್ಯ ಎನ್ನುವುದಕ್ಕೆ ಈ ಸಾಲುಗಳು

"ಪೃಥ್ವಿ ಆಶ್ರಯ ನೀಡು, ಆಗಮನ ರಕ್ಷೆ ಇರು
ವಾಯು ಘೋಷಿಸು, ರುದ್ರ ನೀನು ಶಿವವಾಗು
ಆದಿತ್ಯ ಜ್ಯೋತಿ ಕೊಡು, ಉಷೆ ನೀಡು ಸೌಂದರ್ಯ
ಮಿತ್ರ ಮೈತ್ರಿಯ ತಾರೊ ಪೂಷನನೆ ಪೋಷಿಸೋ! (ಅದೇ ಪುಟ 302)

ಆಧುನಿಕ ಯುಗದಲ್ಲಿ ಮಹಾತ್ಮಗಾಂಧಿಯವರು ಅಹಿಂಸೆಯನ್ನು ಹಿಮಾಲಯದಷ್ಟು ಉನ್ನತಕ್ಕೆ ಎತ್ತಿ ತೋರಿಸಿ ಹಾಗೂ ತಮ್ಮ ರಾಜಕೀಯ ಆಂದೋಲನದ ಅಸ್ತ್ರವನ್ನಾಗಿಯೂ ಈ ತತ್ವವನ್ನು ಅದರ ಮಹತ್ವವನ್ನು ಜಗತ್ತಿಗೆ ಸಾರಿದರು. ಎಂಬ ಚಿಂತನೆ ಜೈನ ಧರ್ಮದ ಅಹಿಂಸಾ ಧರ್ಮ ಪಾಲನೆಗೆ ಮಾದರಿಯಾಗಿದೆ. ಹಿಂಸೆ ಯುದ್ಧ ರಕ್ತಪಾತ ಎಂದಂಷಇಔ ಭಾವಿಸಬೇಕಾಗಿಲ್ಲ ವಾಚಕ ಮಾನಸಿಕ ಹಿಂಸೆಯೂ ಹಿಂಸೆಗೆ ಇನ್ನೊಬ್ಬರ ಮನಸ್ಸು ನೋಯುವಂತೆ. ಮುಖಭಂಗವಾಗುವಂತೆ ಮಾತನಾಡುವುದು ಹಾಗೂ ಅಂತಹ ಕೃತ್ಯಗಳಿಂದ ನಾವು ದೂರವಿರಬೇಕು.

ಅಹಿಂಸೆಯೊಡನೆ ಸತ್ಯವನ್ನ ಬೆರಸಿ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡುವುದಕ್ಕಾಗಿ ಜಗತ್ತಿನಲ್ಲಿ ಅತ್ಯಂತ ಪ್ರಬಲ ರಾಷ್ಟ್ರವಾಗಿದ್ದ ಇಂಗ್ಲಂಡಿನೊಡನೆ ಹೋರಾಡಿ ಗೆದ್ದ ಮಹಾತ್ಮ ಗಾಂಧಿಯವರು ಕೇವಲ ರಾಜಕೀಯ, ಸಾಮಾಜಿಕ, ರಾಷ್ಟ್ರೀಯ, ಅಂತರರಾಷ್ಟ್ರೀಯ ಕ್ಷೇತ್ರಗಳಲ್ಲೂ ಅಹಿಂಸೆಯ ಬಳಕೆ ಸಾಧ್ಯವೆಂದು ತೋರಿಸಿದವರು

ಒಟ್ಟಾರೆಯಾಗಿ ಮಾನವಹಿತದ ಮೂಲಮಂತ್ರವು ಅಹಿಂಸೆಯಾಗಿದೆ. ವಿಶ್ವದ ಎಲ್ಲ ಧರ್ಮಗಳು ತಮ್ಮ ತತ್ತ್ವ ಮತ್ತು ಸಿದ್ಧಾಂತಗಳಿಗೆ ಅನುಗುಣವಾಗಿ ಹಿಂಸೆಯನ್ನು ಪಾಲಿಸುತ್ತಾ ಸಾಗುತ್ತಿವೆ. ಹೀಗೆ ಹಿಂಸೆ ಹಾಗೂ ಅಹಿಂಸೆಯ ವಿಚಾರಮಾಡಿ ಜೀವಿಸಿರಿ ಮತ್ತು ಜೀವಿಸಲು ಬಿಡಿ. ಪ್ರೀತಿಸಿರಿ ಪ್ರೀತಿಸಲು ಬಿಡಿ, ಬದುಕು–ಬದುಕಲು ಬಿಡಿ ಈ ತತ್ವಗಳಿಂದ ನಡೆದರೆ ನಮ್ಮ ಏಳ್ಗೆ, ಅಭಿವೃದಿ, ಕಲ್ಯಾಣ ಆಗಲು ಸಾಧ್ಯ. ಭಾರತದಂತಹ ಅಹಿಂಸಾತ್ಮಕ ದೇಶದಲ್ಲಿ ಅಹಿಂಸೆ ಸಂಸ್ಕೃತಿಯ ಪ್ರತಿಬಿಂಬವಾಗಿದೆ. ವಿವಿಧತೆಯಲ್ಲಿ ಏಕತೆಯನ್ನು ಸಾರುತ್ತದೆ.

ಮೂರನೆಯ ನಾಟಕ ಬಾಪೂ ದರ್ಶನ, ಇದು ಮಹಾತ್ಮಾಗಾಂಧಿಯ ಸ್ವಾತಂತ್ರ್ಯ ಹೋರಾಟ ಹಾಗೂ ಇಡೀ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ – ಆಗಿನ ತ್ಯಾಗಿಗಳು. ಹೋರಾಟಗಾರರ, ನಾಯಕರ ಬಗ್ಗೆ ಬೆಳಕು ಚೆಲ್ಲುವ ನಾಟಕ. ಎಲ್ಲಾ ನಾಯಕರೂ ಇಲ್ಲಿ ಬರುತ್ತಾರೆ. ಮಾತಾಡುತ್ತಾರೆ, ಇರುತ್ತಾರೆ, ಒಟ್ಟಿನಲ್ಲಿ – ಸ್ವಾತಂತ್ರ್ಯ ಹೋರಾಟದ ಬಗ್ಗೆ ಈಗಿನ ಯುವಕರಲ್ಲಿ ಮಕ್ಕಳಲ್ಲಿ ಅರಿವಿಲ್ಲ. ಈ ನಾಟಕ ಓದುವುದರಿಂದ, ನೋಡುವುದರಿಂದ ಭಾರತ ಸ್ವಾತಂತ್ರ್ಯದ ಬಗ್ಗೆ ಎಂತಹ ದಾರುಣ ಕಥೆ ಇದೆ. ನಮ್ಮ ಹಿರಿಯರ ತ್ಯಾಗ, ಬಲಿದಾನ ಎಂತಿವೆ ಎನ್ನವ ಬಗ್ಗೆ – ನಾಡಿನ ಬಗ್ಗೆ ದೊಡ್ಡ ತಿಳಿವು ಇದೆ. ಈ ರೂಪಕವು ತುಂಬಾ ಪ್ರದರ್ಶನ – ಆಗಬೇಕು ಪ್ರತಿ ಶಾಲೆಯಲ್ಲೂ ಗ್ರಾಮಗಳಲ್ಲೂ ಆಗಬೇಕು, ಪಠ್ಯ ಪುಸ್ತಕದಲ್ಲಿ ಇದು ಮೂಡಿ ಬರಬೇಕು. ಮಕ್ಕಳಿಗೂ, ಶಿಕ್ಷಕರಿಗೂ, ಪೋಷಕರಿಗೂ, ಈ ನಾಟಕ ಮನನವಾಗಬೇಕು ಹಾಗಾದಾಗ ಮಾತ್ರ ನಮ್ಮ ಸ್ವಾತಂತ್ರ್ಯದ ಬಗ್ಗೆ ಅರಿವು ಮೂಡುತ್ತದೆ.

ಮನುಷ್ಯನಿಗೆ ಬೇಕಾದ ಅಥವಾ ಮೂಲಭೂತ ಬೇಡಿಕೆಗಳೇ ಆದ ಅನ್ನ ಅರಿವೆ ಎಲ್ಲರಿಗೂ ಸಿಗಬೇಕು. ಎಲ್ಲರೂ ಸಮಾನವಾಗಿ ಬಾಳಬೇಕು ಆ ನಂತರ ಉಳಿದೆಲ್ಲವನ್ನೂ ಆಗಲು ಸಾಧ್ಯ ಎಂಬ ವಿಚಾರ ಇಲ್ಲಿದೆ ಇಲ್ಲಿರುವ ಮಾನವೀಯತೆಯ ನುಡಿಗಳು ನಿರ್ದಿಷ್ಟವಾದ ಸಿದ್ಧಾಂತಗಳಿಂದ ವರ್ಗ ಪ್ರಜ್ಞೆಯಿಂದಾಗಿ, ವರ್ಣ ಪ್ರಜ್ಞೆಯಿಂದಾಗಿ ಬಂದದ್ದಲ್ಲ ಮನುಷ್ಯ ತನ್ನೊಳಗಿನ ಕಿಲುಬುತನವನ್ನು ಹೊರದೂಡಿ ಶುದ್ಧ ತಾನಾಗಬೇಕು ಭಾರತೀಯ ಸಮಾಜದಲ್ಲಿ ಬೀಡುಬಿಟ್ಟಿರುವ ಜಾತೀಯತೆ ಮತಾಂಧತೆ ಮತ್ತು ತಾರತಮ್ಯ ನೀತಿಗಳನ್ನು ಹೊಡೆದೋಡಿಸಲು ಸಾಶಿಮ ಯುವ ಜನಾಂಗಕ್ಕೆ ಈ ಮೂಲಕ ಕರೆ ನೀಡುತ್ತಾರೆ.

'ಬಾಪು ದರ್ಶನ', ರೂಪಕವು ಮಹಾತ್ಮ ಗಾಂಧಿಯ ಹೋರಾಟದ ಬಗ್ಗೆ ಬೆಳಕು ಚೆಲ್ಲುತ್ತದೆ.

ಯುವಕರಲ್ಲಿ ಮಕ್ಕಳಲ್ಲಿ ಸ್ವತಂತ್ರ್ಯ ಹೋರಾಟದ ಬಗೆಗೆ ಅರಿವು ಮೂಡುತ್ತದೆ.

ಸಕಲ ಭಾಂದವರೊಡನೆ ಕೂಡಿದ ಪ್ರಾರ್ಥನೆಯನ್ನು ಗಾಂಧಿಜೀಯ ಆತ್ಮಶ್ರೀಯನ್ನು ರೂಪಕದಲ್ಲಿ ಕಾಣಬಹುದು. ಗಾಂಧೀಜಿ ಆತ್ಮಬಲದಿಂದ ಮಹಾತ್ಮರಾದರು. ಅದಕ್ಕೆ ಇದು – ಈ ಕೆಳಗಿನ ಸಾಲುಗಳು –

"ಆತ್ಮಬಲದುನ್ನತಿಯ ಅಗ್ನಿಗೋಪುರ ಶಕ್ತಿ!
ನರ–ಹರರ ಬೆಸುಗೆಯಾ ಐಕ್ಯಾನುಸಂಧಾನ!
ಆಂತರಿಕ ದೇವನನು ಎಚ್ಚರಿಸುವಾ ಮಂತ್ರ!
ತಾಯಿ,ಪ್ರಾರ್ಥನೆಯು ಪರಿಪರಿಯ ಪರಿತಾಪವಲ್ಲ!
ದೇವನಲಿ ಬಯಸಿದುದ ಮಾಡಿಸುವುದೂ ಅಲ್ಲ! (ಅದೇ ಪುಟ 155)

ಗಾಂಧೀಜಿಯ ಪ್ರಾರ್ಥನೆಯ ಉದ್ದೇಶ ಇದೇ ಆಗಿತ್ತು. ಮಹಾತ್ಮ ಗಾಂಧೀಜಿಯವರೊಬ್ಬರೇ ಅಲ್ಲ – ಪ್ರತಿ ಮಹಾತ್ಮರು, ಹುತಾತ್ಮರೂ, ಏನು? ಏನಾಗಿದ್ದಾರೆ? ಎಂಬುದಕ್ಕೆ ಮರುಳಯ್ಯನವರ ಈ ಪದ್ಯ ನೋಡಿ –

ಒಬ್ಬರಿಗಿಂತ ಇಬ್ಬರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣ ಕೊಡುವ ಇಂತಹ ವ್ಯಕ್ತಿಗಳನ್ನು ಸಾ. ಶಿ. ಮರುಳಯ್ಯ ತಮ್ಮ ಈ ನಾಟಕದಲ್ಲಿ ಮೇಲಿಂದ ಮೇಲೆ ಕಾಣಿಸುತ್ತಾರೆ. ಝಾನ್ಸಿರಾಣಿ ತನ್ನ ಸೈನಿಕರನ್ನು ಹುರಿದುಂಬಿಸುವುದು ಹೀಗೆ –

"ಇದು ನಿಮ್ಮ ಕಟ್ಟಕಡೆಯ ಹೋರಾಟ, ಸೋಲಾಗಲಿ
ಗೆಲುವಾಗಲಿ, ಅದರ ಗೊಡವೆ ಬೇಡ, ನಿಮ್ಮೆಲ್ಲ ಸ್ವಾರ್ಥವನು
ಬದಿಗಿರಿಸಿ, ದೇಶರಕ್ಷಣೆಗಾಗಿ ಹೋರಾಡಿ" (ಅದೇ ಪುಟ 188)

ಸ್ವಾತಂತ್ರ್ಯ ನಂತರ ಹೊಸ ಸಮಾಜ ಕಟ್ಟುವ ಕಲ್ಪನೆ ಸಾಹಕಾರ ಗೊಳ್ಳದಿದ್ದಂತಹ ಸಂಧರ್ಬದಲ್ಲಿ ಉಂಟಾದ ಆಕ್ರೋಶ ಸಾ. ಶಿ.

ಮರುಳಯ್ಯನವರ ಸಾಹಿತ್ಯದಲ್ಲಿ ಮುಡಿಬಂದಿರುವದನ್ನು ಗಮನಿಸಬಹುದು. ತನ್ನ ರಕ್ಷಣೆಯನ್ನು ತಾನು ಮಾಡಿಕೊಳ್ಳದ ಯಾವುದೇ ಜನಾಂಗವು ಸ್ವಾಭಿಮಾನಿಯಾಗಿ ಬಾಳಲಾರದು 'ಗೆಲ್ಲುವ, ಇಲ್ಲವೆ ಸಾಯುವ' ಎಂಬ ದೃಢನಿಶ್ಚಯದಿಂದ ಹೋರಾಡಲು ಒಗ್ಗಟ್ಟಾಗಿ!

'ಸ್ವರಾಜ್ಯವು ನನ್ನ ಜನ್ಮಸಿದ್ದ ಹಕ್ಕು,ಅದನ್ನು ದೊರಕಿಸಿಯೇ ತೀರುವೆನು'

ಹೀಗೆಯೇ ಈ ನೃತ್ಯದ ಉದ್ದಕ್ಕೂ ದೇಶಾಭಿಮಾನ ತುಂಬುವಂತಹ ಬರಹಗಳು, ಸಾ.ಶಿ. ಅವರ ಶ್ರೇಷ್ಠ ಬರಹದ ನಿದರ್ಶನಗಳಾಗಿವೆ.

ಇವರ ನೃತ್ಯರೂಪಕಗಳಲ್ಲಿ ಸಾಮಾಜಿಕ ಚಿಂತನೆ, ಸಾಮಾಜಿಕ ವ್ಯವಸ್ಥೆಯಲ್ಲಿ ತರತಮಗಳು ಏಕತೆಗೆ ದಕ್ಕೆ ತರುತ್ತವೆ. ಇದರಿಂದ ಸಾಮಾಜಿಕ ಸಂಘರ್ಷ ಅಥವಾ ಕಲಹಗಳು ಹೆಚ್ಚಾಗಿರುತ್ತವೆ ಮತ್ತು ನಿರಂತರವಾಗಿರುತ್ತವೆ. ಪ್ರಜ್ಞಾವಂತ ನಾಗರಿಕ ಸಮಾಜ ಅರ್ಥಹೀನ ಆಚರಣೆಗಳನ್ನು ಅನುಸರಿಸಿಕೊಂಡು ಬರುತ್ತಿರುವುದನ್ನು ಕಾಣುತ್ತೇವೆ. ಆದರೆ, ಏಕತಾ ದೃಷ್ಟಿಯಿಂದ ಇಲ್ಲಿ ಯಾರೂ ಬಲ ಹೊಂದಿಲ್ಲ. ಎಲ್ಲರಲ್ಲೂ ಭಿನ್ನ ಭೇದವ ಮರೆತು ಬದುಕಲು ಬರುತ್ತಿಲ್ಲ. ಆದರೂ ಸಮಾನತೆಯ ಸುಂದರ ವಾತಾವರಣ ಕಲ್ಪಿಸಲು ಚಿಂತಕರು ಶ್ರಮಿಸುತ್ತಲೇ ಇದ್ದಾರೆ.

ಇಲ್ಲಿನ ಗಟ್ಟಿಯಾದ ಅನುಭವ, ಪ್ರಬುದ್ಧ ಜೀವನ ದೃಷ್ಟಿ, ವಸ್ತುನಿಷ್ಠ ಪ್ರಾಮಾಣಿಕತೆ, ಸಾಮಾಜಿಕ ನಿಲುವುಗಳಿಂದಾಗಿ ಅವರ ಕಾದಂಬರಿಗಳು ಆಧುನಿಕ ಕನ್ನಡ ಸಾಹಿತ್ಯದಲ್ಲ ತಮ್ಮದೇ ಆದ ವಿಶೇಷ ಛಾಪನ್ನು ಮೂಡಿಸಿವೆ. ಕಾದಂಬರಿಗಳ ಕೇಂದ್ರ ಪಾತ್ರಗಳು ಒಂದು ಇನ್ನೊಂದರ ಪ್ರತಿಬಿಂಬದಂತೆ ರೂಪುಗೊಳ್ಳದೆ ತೀರಾ ಭಿನ್ನ ವ್ಯಕ್ತಿತ್ವಗಳನ್ನು ಕಾಪಾಡಿಕೊಂಡಿವೆ. ಅವರ ಕಾದಂಬರಿಗಳ ಮುಖ್ಯ ವಸ್ತು ಏನೇ ಇದ್ದರೂ, ಗಂಡು–ಹೆಣ್ಣಿನ ಸಂಬಂಧ, ಮನುಷ್ಯನ ಸ್ವಭಾವದ ವಿಶ್ಲೇಷಣೆ, ಜೀವನದ ಅರ್ಥದ ಶೋಧನೆ ಇದ್ದೇ ಇರುತ್ತದೆ. ಪಾತ್ರಗಳು ಮಾತಿನ ಕಡೆಗೆ ಹೆಚ್ಚಿನ ಪ್ರಾಮುಖ್ಯವನ್ನು ಕೊಡದೆ, ಅವು ಅನುಭವಿಸುತ್ತಿರುವ ಸನ್ನಿವೇಶಗಳ ಮೂಲಕ, ತಮ್ಮ ಮನದೊಳಗೆ ಅದುಮಿಟ್ಟಿರುವ ಭಾವನೆಗಳನ್ನು ವ್ಯಕ್ತಪಡಿಸುತ್ತವೆ.

"ನಿಮ್ಮ ದುಡಿಮೆ ದೊಡ್ಡದಲ್ಲ ಹೆಚ್ಚುಲಾಭ ಕೋರತನದಿಂದ ದೇಶಕಷ್ಟೆಯಲ್ಲ ನಿಮಗೂ ನಿಮ್ಮಕುಟುಂಬ ವರ್ಗಕ್ಕೂ ಹಿತವಲ್ಲಾ. ಅನ್ನಕ್ಕೆ ಮಣ್ಣು ಬೆರೆಸಿ ಲಾಭ ತುರುಗದ ಬೆನ್ನು ಹತ್ತಿದ್ದರೆ ನಿಮ್ಮ ಅನ್ನಕ್ಕೆ ನೀವು ವಿಷ ಹಾಕಿಕೊಂಡಂತೆ! ನಿಮ್ಮ ಮಕ್ಕಳ ಹಾಲಿಗೆ ನೀವೇ ವಿಷ ಬೆರೆಸಿದಂತೆ" (ಸಾ.ಶಿ.ಮ ನೃತ್ಯರೂಪಕಗಳು ರಾಗಿಣಿ ಪ್ರತಿಷ್ಠಾನ ಬೆಂಗಳೂರು 1996 ಪುಟ 319) ಎಂದು ವ್ಯಾಪಾರಿ ವರ್ಗಕ್ಕೆ ಸಂದೇಶ ತಲುಪಿಸುತ್ತಾರೆ. ದೇಶದ ಸ್ವಾಸ್ಥ್ಯ ಅಡಗಿರುವದು ವ್ಯಾಪಾರಿಗಳ ಕೈಯಲ್ಲಿ ತಿನ್ನುವ ಆಹಾರದಲ್ಲಿ ಅನ್ಯಪದಾರ್ಥ ಸೇರಿದರೆ ಈಡಿ ಸಮಾಜವೇ ಸರ್ವ ನಾಶವಾದೀತು. ಎನ್ನುವ ಭಯದಿಂದ ಹೇಳಿರುವ ಈ ಮಾತು ಯೋಗ್ಯವಾದದ್ದು. ರೂಪಕದ ಅಂತ್ಯದಲ್ಲಿ ಭಾರತಾಂಬೆಯ ಮಕ್ಕಳಾದ ಗಾಂಧೀಜೀ ಸುಭಾಷಚಂದ್ರ ಭೋಸ್, ಜವಾಹರಲಾಲ ನೆಹರು ಮುಂತಾದವರು ಒಂದೇ ರಂಗದಲ್ಲಿ ಸೇರುತ್ತಾರೆ. ಅವರೆಲ್ಲರ ಆದರ್ಶಗಳನ್ನು ಪಾಲಿಸಿ ಸಧೃಢ ಭಾರತವನ್ನು ನಿರ್ಮಿಸಬೇಕೆಂಬ ಆಶಯವಿದೆ.

ಕತ್ತಲೆಯ ದಟ್ಟ ಸಾಂದ್ರತೆ ಕಡಲು ಕತ್ತಲಿನ ಸಮ್ಮೇಳನವನ್ನು ಹೇಳುತ್ತವೆ. ಸೃಷ್ಟಿಕ್ರಿಯೆ ಅಭಿವ್ಯಕ್ತಿ ಇದ್ದು ಸಮಷ್ಟಿ ಸಮಸ್ತ ಕಾಲವು ಇಡೀ ಕತ್ತಲೆ ಎಂಬುದು ಕವಿಯದು ಇದು ನಿಜವಾದರೂ ಚಕ್ರ ತಿರುಗಿದಂತೆ ಕತ್ತಲಿನಿಂದ ಬೆಳಕಿನೆಡೆಗೆ ಬರುವ ಅತಿಯಾದ ಜನನ ಅದರಿಂದುಂಟಾಗುವ ಅನಾನುಕೂಲತೆಗಳು ಸಾಮಾಜಿಕ ಸಮಸ್ಯೆಗಳನ್ನು ಧ್ವನಿಸುವ ವಾಕ್ಯವಾಗಿ ಬರುತ್ತವೆ. ಪದ್ಯದಲ್ಲಿರುವ ಅಧಿಕಾರ ನಾನತ್ವ ಐಶ್ವರ್ಯ ಆಡಂಬರಕ್ಕೆ ಮೌಢ್ಯ ಕೀಳರಿಮೆ ಅಹಂ ಸ್ವಾರ್ಥ ಯೌವನದ ರೂಪು ಅದರಿಂದಾಗುವ ಕೆಡಕುಗಳು ಅಸೂಯೆ ಕ್ರೌರ್ಯ ಮದ ಇನ್ನೂ ಮುಂತಾದ ಅಂಶಗಳು ತಿಳಿದು ಬರುತ್ತವೆ.

ಎಂದು ಬೆಳಕನ್ನು ಆಹ್ವಾನಿಸುವ ಕವಿ ಪರಿಸರದ ಪ್ರಕ್ಷುದ್ಧತೆ, ರಾಜಕೀಯ ಮತ್ತು ಸಾಮಾಜಿಕ ಬದುಕಿನ ಅಸ್ವಸ್ಥತೆಗಳು ಕತ್ತಲೆ ಇವುಗಳ ನಿವಾರಣೆಗೆ ಬೆಳಕಿನ ಅಗತ್ಯವನ್ನು ಕವಿ ಸೂಕ್ಷ್ಮವಾಗಿ ಬಿಚ್ಚಿಟ್ಟಿದ್ದಾರೆ.

"ಬೇಡ ಬೇಡ ದಮ್ಮಯ್ಯ ಬೇಡ
ಬೇಡವೆನೋ ನಿನ್ನ ಸ್ವಾಮಿ
ಬೀಡಿನಲ್ಲಿ ಮೊಲೆಯಂಬ ಹಸುಳೆ
ಕುಡಿಯೊಂದೆ ಬಾಳ ಬಳ್ಳಿ
ಹಸಿದು ಹಂಬಲಿಸಿ ಕಾದು ಕುಳುತಿಹುದು.
ನನಗಾಗಿ ಬಾಯಿ ತೆರೆದು
ಉಣಿಸಿತ್ತು ಬರುವೆ ಹಾಲೂಡಿ ಬರುವೆ
ಇದು ಸತ್ಯವಾಕು ನಂಬು" (ಅದೇ ಪುಟ 400) ಎಂಬ ಶಿವರಾತ್ರಿಯ ಮಹಿಮೆಯಲ್ಲಿನ ರೂಪಕದಲ್ಲಿ ಜಿಂಕೆಯ ಮಾತಿನ ಸತ್ಯವನ್ನರಿತ ಬೇಡಾ ಅದನ್ನು ಬಿಟ್ಟು ಬಿಡುತ್ತಾನೆ. ಮಾನವೀಯತೆಯನ್ನು ಮೆರೆಯುವ ಈ ಭಾಗವು ಗೋವಿನ ಕತೆಯನ್ನು ನೆನಪಿಸುತ್ತದೆ.

ದೈರ್ಯಂ ಸರ್ವತ್ರ ಸಾಧನಂ ಎಂಬ ಲೋಕೋಕ್ತಿಯಂತೆ, ದೈರ್ಯದಿಂದ ಕಾರ್ಯಪ್ರವೃತ್ತರಾದಾಗ ಯಶಸ್ಸು ಖಚಿತ. ತೊಂದರೆಗೆ ಸಿಲುಕಿದಾಗ ನಿಶ್ಚಿಂತೆಯಿಂದ ಎದುರಿಸುವುದು. ಮುಖ್ಯವಾಗುತ್ತದೆ. ಸಮಯೋಚಿತ ಪ್ರಜ್ಞೆಯಿಂದ ಸಮಸ್ಯೆಯನ್ನು ನಿವಾರಿಸಿಕೊಳ್ಳುವುದು. ಬುದ್ಧಿವಂತಿಕೆಯ ಲಕ್ಷಣ ಪ್ರಸ್ತುತ ಸಂದರ್ಭದಲ್ಲಿ ಸಮಯೋಚಿತ ಪ್ರಜ್ಞೆ ತೀರಾ ಅವಶ್ಯಕವೆಂಬುದನ್ನು ಈ ಮೇಲಿನ ರೂಪಕದಲ್ಲಿ ವ್ಯಕ್ತವಾಗಿದೆ.

'ರಾಸಲೀಲೆ'ಯ ನೃತ್ಯ ರೂಪಕದ ಮೂಲಕ ಸಾ. ಶಿ. ಮರುಳಯ್ಯನವರು ರಾಧಾಕೃಷ್ಣರ ಪ್ರೇಮ "ಹೌದು ಅವರ ಪ್ರಣಯ ಕೇವಲ ಲೌಕಿಕದ ಲೈಂಗಿಕಾರ್ಥದಲ್ಲಿ ನಿಂತಿಲ್ಲಾ ಅದು ಆಧ್ಯಾತ್ಮ ಪರವಾದದ್ದು. ಸಂಸಾರ ಸಂವರ್ಧನೆಗೆ ಪುರುಷ ಮತ್ತು ಪ್ರಕೃತಿಯ ಸಂಮಿಲನ ಅತ್ಯಾವಶ್ಯಕ ಎಂಬುದನ್ನು ರಾಧಾಕೃಷ್ಣರ ಪ್ರಯಣ ಸಂಕೇತಿಸುತ್ತದೆ. ಪ್ರತಿಮಾ ದೃಷ್ಟಿಯಲ್ಲಿ ಗುರುತಿಸಿದಾಗ ಮಾತ್ರ ಅಲ್ಲಿಯ ಕಾಮ ಪ್ರೇಮವಾಗಿ, ಪ್ರೇಮ ಪೂಜೆಯಾಗಿ ಪೂಜೆ ಸಾಲೊಕ್ಯ ಸಾನ್ನಿಧ್ಯ ಸಾರೂಪ್ಯ ಸಾಯಜ್ಯವೆನಿಸಿ. ಮುಕ್ತಿಯ ಮಹಾ ಫಲವನ್ನೀಯಬಲ್ಲದು. ಆ ಕಾರಣ ಪರವಸ್ತುವೇ ಕೃಷ್ಣ ಸಾಧಕವೇ ರಾಧೆ. ಲೌಕಿಕದ ಕಷ್ಟ ಕಾರ್ಪಣ್ಯಗಳನ್ನು ದಾಟಿ ದೈಹಿಕ ಸುಖ ದುಃಖಗಳನ್ನು ಮರೆತು ಭಕ್ತಭಗವಂತನಡೆಗೆ ಧಾವಿಸುವ ಭಾವನೆಯೇ ಈ ರಾಸಲೀಲೆಯ ಗೂಡಾರ್ಥ! ಹೊರಮ್ಮೆ ಪ್ರಣಯದಂತೆ ಕಂಡರೂ ಅದರ ಒಳಮ್ಮೆ ಪ್ರಣವವನ್ನೇ ತುಂಬಿಕೊಂಡಿರುವಂಥದು

ಬದುಕಿನಲ್ಲಿ ಎದುರಾಗುವ ಸಮಸ್ಯೆಗಳನ್ನು ಅತಿಯಾಗಿ ಮನಸ್ಸಿಗೆ ಹಚ್ಚಿಕೊಳ್ಳದೆ ಆ ಕ್ಷಣಗಳನ್ನು ಬೇರೊಬ್ಬರ ಕಣ್ಣೀರೊರೆಸುವ ಕ್ಷಣಗಳನ್ನಾಗಿ ಮಾರ್ಪಡಿಸುವುದು ಎಲ್ಲರಿಗೂ ಸಾಧ್ಯ. ಆದರೆ ಮನುಷ್ಯ ಈ ನಿಟ್ಟಿನಲ್ಲಿ ಪ್ರಯತ್ನಿಸದೇ ದುರ್ಘಟನೆಗಳನ್ನು ಮತ್ತೆ ಮತ್ತೆ ಮನನ ಮಾಡಿಕೊಳ್ಳುತ್ತಾ ಕೊರಗುತ್ತಿರುತ್ತಾರೆ. ಅದನ್ನು ಬಿಟ್ಟು ಇತರರ ಸುಖ ಸಂತೋಷದಲ್ಲಿ ಭಾಗಿಯಾಗುವ ಮೂಲಕ ಬದುಕನ್ನು ಸಾರ್ಥಕಗೊಳಿಸಿಕೊಳ್ಳುವುದು ಮುಖ್ಯವಾದದು ಎಂಬ ಚಿಂತನಾಪರ ಸಂಧೇಶವನ್ನು ಈ ಮೇಲಿನ ರೂಪವೂ ವ್ಯಕ್ತಪಡಿಸಿದೆ.

'ಸ್ನೋವೈಟ್' ನೃತ್ಯರೂಪವೂ ತ್ರಿಲೋಕ ಸುಂದರಿ ಸ್ನೋವೈಟ್ ತನ್ನ ಚಿಕ್ಕಮ್ಮಳಾದ ಸ್ವರ್ಣ ಸುಂದರಿಯ ಮಾತ್ಸರ್ಯಕ್ಕೆ ಗುರಿಯಾಗಿ ಅದರಿಂದ ಪಾರಾಗಿ ಬರುವುದೇ ಇದರ ಕಥಾವಸ್ತು ಮಾಹಾರಾಜರ "ಮುದ್ದಿನ ಮಗಳು ತಾಯಿ ಇಲ್ಲದ ಈ ತಬ್ಬಲಿ ಹುಡುಗಿಗೆ ನೀನು

ತಾಯಿಯಾಗು ಎಂದು, ತನ್ನ ಎರಡನೇ ಹೆಂಡತಿ ಸ್ವರ್ಣ ಸುಂದರಿಗೆ ತಿಳಿಸಿ ನಿರ್ಗಮಿಸುತ್ತಾನೆ. ಬಂಜೆಯಾದರೂ ತುಂಬಾ ಅಕ್ಕರೆಯಿಂದ ಸ್ನೋವೈಟ್‌ಳನ್ನು ನೋಡಿಕೊಳ್ಳುತ್ತಾಳೆ. ಆದರೆ ಅವಳಿಗೊಂದು ಅಹಂ ಇರುತ್ತದೆ. ಇಡೀ ಜಗತ್ತಿನಲ್ಲಿ ತಾನೊಬ್ಬಳೇ ಚೆಲುವೆ ಹಾಗೂ ಅದಕ್ಕೆ ಪ್ರತಿ ಸ್ಪರ್ಧಿಗಳು ಯಾರು ಇಲ್ಲವೆಂದು ಅದನ್ನು ಪರೀಕ್ಷಿಸಲು ತನ್ನ ಬಳಿರುವ ಮಾಯಾದರ್ಪಣದ ಮೊರೆ ಹೋದಾಗ ಸ್ನೋವೈಟ್ ಎಂದು ತಿಳಿದ ಆಕೆ, ಅವಳನ್ನು ಕೊಲ್ಲಲು ಅನೇಕ ಸಂಚುಗಳನ್ನು ರೂಪಿಸುತ್ತಾಳೆ. ಪ್ರತಿ ಸಂಚಿನಲ್ಲಿಯೂ ಆ ಸಾವಿನ ದವಡೆಯಿಂದ ಸ್ನೋವೈಟ್ ತಪ್ಪಿಸಿಕೊಳ್ಳುತ್ತಾಳೆ. ಸ್ನೋವೈಟ್‌ಳಿಗೆ ವಿಷದ ಹಣ್ಣಿನಿಂದ ಎಚ್ಚರಿಸಲು ರಾಜೇಂದ್ರನೆಂಬ ಬಿದನೂರ ರಾಜಕುಮಾರ ಬರುತ್ತಾನೆ, ಬಂದು ಅವಳನ್ನು ಎಚ್ಚರಿಸುತ್ತಾನೆ. ಹೀಗಿರುವಾಗ ಮಾಹಾರಾಜ ಬಂದು ಎಲ್ಲಾ ತಿಳಿದೇನು ಮಗಳೆ! ಕಷ್ಟ ಎಂದಿಗೂ ಸುಖದ ಸೋಪಾನ ಕೆಟ್ಟ ಕನಸೆಂದು ತಿಳಿದು ಭವ್ಯ ಭವಿಷ್ಯವ ನೆನೆದು ಕಳೆದುದನ್ನು ಮರೆತು ಬೀಡು! ಇಬ್ಬರೂ ಇತ್ತ ಬನ್ನಿ ಎಂದು ರೂಪಕವೂ ಸುಖಾಂತಗೊಳ್ಳುತ್ತದೆ". ಆಗಾಗಿ ಭವಿಷ್ಯವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲ ಯಾರನ್ನೂ ಬಿಟ್ಟಿಲ್ಲ. ಅದನ್ನು ತಿಳಿಯುವುದು ಅಸಾಧ್ಯವೆಂದು ಎಲ್ಲರಿಗೂ ಗೊತ್ತಿದೆ. ಇದನ್ನೇ ಬಂಡವಾಳ ಮಾಡಿಕೊಂಡ ಕೆಲವರು ಸಾಮಾನ್ಯರನ್ನು ಹೆದರಿಸಿ ವಂಚಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿರುವುದು ದುರಂತ, ಭಷ್ಯದ ಆಧಾರದ ಮೇಲೆ ಬದುಕು ನಡೆಯುವುದಿಲ್ಲ. ಭವಿಷ್ಯಕಾರರ ಮಾತಿನಂತೆ ಯಾವುದೂ ನಿರ್ಧಾರವಾಗುವುದಿಲ್ಲ. ಜೀವನ ಹೇಗಿರುತ್ತದೋ ಹಾಗೇ ಸ್ವೀಕರಿಸುವುದು ಬುದ್ಧಿವಂತರ ಲಕ್ಷಣ. ಅಸೂಯೆ, ಆಸೆ, ಕ್ರೌರ್ಯ, ಗೃಹ ಚಿಂತೆ, ಪ್ರೇಮ ಭೀತಿ ಮೋಸ ಮೊದಲಾದ ಭಾವಗಳನ್ನು ಕುರಿತಂತೆ ಕವಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಯೋಗ್ಯವಾಗಿವೆ, ಅಹಂಕಾರದ ಸೂಕ್ಷ್ಮತೆಯನ್ನು ಅತಿ ಯನ್ನು ಕುರಿತು ಹೇಳಿರುವ ಮಾತುಗಳು ಪ್ರಸ್ತುತ ಸಮಾಜಕ್ಕೆ ಕನ್ನಡಿಯಂತಿದೆ.

'ಪೃಥಾ ಪವಿತ್ರೆ' ರೂಪಕದಲ್ಲಿ ಕುಂತಿ ಕರ್ಣನಿಗೆ ತಾಯಿಯಾದರೂ ಹೇಳಲಾರದ ಸ್ಥಿತಿ ತನ್ನ ಮಗನನ್ನು, ತನ್ನ ಇನ್ನೊಬ್ಬ ಮಗನಿಂದ ಕೊಲ್ಲಿಸುವ ಸಂಚನ್ನೂ ಮತ್ತ್ಯಾವ ಹೆಣ್ಣು ಮಾಡಲಾರಳು ಈ ಎಲ್ಲಾ ವಿಚಿತ್ರ ಸಂಗತಿಗಳು ಕುಂತಿ ಜೀವನದಲ್ಲಿ ನಡೆದಿದೆ ಎಂಬುದನ್ನು, ಕತ್ತಲು–ಬೆಳಕುಗಳ ಸಾಂಕೇತಿಕತೆಯಲ್ಲಿ ಕುಂತಿಯ ಅಥವಾ ಒಬ್ಬ ಸಾಮಾನ್ಯ ಹೆಣ್ಣಿನ ಜೀವನವನ್ನು ಸಾ.ಶಿ.ಮ ರವರು ನಿರೂಪಿಸಿದ್ದಾರೆ.

'ಮನೆಯೊಳಗಣ ಕಿಚ್ಚು' ರೂಪಕದಲ್ಲಿ ಹೆಣ್ಣಿನ ಸಹಜ ಮನೋಭಿಲಾಷೆಯನ್ನು ಕುರಿತಂತೆ ಆಕಾಶಕ್ಕೆ ಅಗಲವಾಗಬೇಕೆಂಬ ಆಸೆ, ಭಾವಕ್ಕೆ ರೂಪ ಪಡೆಯುವಾಸೆ, ಕುಂಚ ಸದಾ ಚಿತ್ರ ಬೀಡಿಸುತ್ತಿರಬೇಕೆಂಬ ಆಸೆ. ದುಂಬಿ ಹೂವನ್ನು ಅರಸಿದ್ದರೆ ಹೂ ಮುಡಿಯನ್ನು ಹುಡುಕುತ್ತದೆ. ಕೋಗಿಲೆ ಚೈತ್ರ ಋತುವನ್ನು ಬಯಸಿದರೆ ಚೈತ್ರಮಾಸ ಇನ್ನೂ ಚಂದವಾಗಿ ಕಾಣಬೇಕೆಂಬ ಆಸೆ. ನದಿ ಕಡಲ ಒಡಲು ಸೇರಲೂ ಹರಿದರೆ ಆಗಸ ನೆಲ ಸ್ಪರ್ಶಕ್ಕಾಗಿ ಬಾಗಿ ನಿಲ್ಲುತ್ತದೆ. ಕಾಮಿಗೆ ಪುರುಷನನ್ನು ಕೂಡುವಾಸೆ ಇದ್ದರೆ, ಪುರುಷ್ಯನಿಗೆ ತನ್ನ ಪ್ರೀಯಳ ಆಸೆ ಇರುತ್ತದೆ. ಈ ಎಲ್ಲಾ ಆಸೆಗಳಂತೆ ಸೂರ್ಯ ಚಂದ್ರ ಬೆಳಗಬೇಕೆಂಬ ಆಸೆ ಹೊತ್ತಿರುವಂತೆ ಮಗು ಪಡೆಯಬೇಕೆಂಬುದು ಹೆಣ್ಣಿಗೆ ಬಹುದೊಡ್ಡ ಆಸೆ. ಅವಳು ಬಂಜೆಯೆಂಬ ಶಬ್ದವನ್ನು ಹೊರಲಾರಳು. ಜನಪದರು ಹೇಳುವ 'ಬಾಲರಿಲ್ಲದ ಮ್ಯಾಲೆ ಬಾಲಾದ್ಯಾತಾರ ಜನ್ಮಾ...... ಬಾಳಲೆಯ ಹಾಸುಂಡು ಬೀಸಿ ಎಸದ್ಹಂಗ' (ಅದೇ ಪುಟ 466) ಎನ್ನುವ ಮಾತನ್ನು ನೆನಪಿಸುತ್ತಾರೆ.

ಶಾಂತಲೆಯು ತನ್ನ ಹೊಟ್ಟೆಯಲ್ಲಿ ಮಕ್ಕಳಾಗುವುದನ್ನು ಗಮನಾರ್ಹವಾಗಿ ತೆಗೆದುಕೊಂಡು ಚೆನ್ನಕೇಶವವನೇ ಮಗನಾಗಲಿ ಎಂದು ಬೇಡಿಕೊಳ್ಳುತ್ತಾಳೆ. ಆ ಆಸೆಹೊತ್ತು ಶಾಂತಲೆಯು ಚನ್ನಕೇಶವನ ಶಿಲ್ಪವನ್ನು ನಿರ್ಮಿಸಿ ಅವನಿಗೊಂದು ದೇವಾಲಯವ ನಿರ್ಮಾಣ ಮಾಡುವ ಅಭೀಕ್ಷೆ ತಾಳುತ್ತಾಳೆ. ಜಕ್ಕಣಚಾರ್ಯರಿಂದ ನಿರ್ಮಾಣಗೊಂಡ ಇಂತಹ ಮೂರ್ತಿಯ ಶಾಸನ ಶ್ಲೋಕದ ವಿಷಯದಲ್ಲಿ ಲಕ್ಷ್ಮಲೆ ಬೊಮ್ಮಲೆಯರಿಂದ ಉಂಟಾದ ಸಂಶಯ, ಮೂರ್ತಿಯನ್ನು ಪೂಜೆಗೆ ಅನರ್ಹವಾಗುವಂತೆ ಮಾಡುತ್ತದೆ. ಚೆನ್ನಕೇಶವ ಮೂರ್ತಿ ದೇಗುಲ ನೋಡಲು ಹೊರಟು ಮುಂದೆ ನಡೆಯಲಿರುವ ಉದ್ಘಾಟನಾ ಕಾರ್ಯಕ್ರಮಗಳ ವೀಕ್ಷಿಸಿ ತಮ್ಮ ಹೆಸರು ಶಾಸನದಲ್ಲಿ ಬರಬೇಕೆಂದು ಬಯಸುತ್ತಾರೆ. ಇದಕ್ಕೆ ಶಾಂತಲೆ ಮೊದಲು ಒಪ್ಪದಿದ್ದರೂ ಅವರ ಕಟೋಕ್ತಿಗಳ ಮರ್ಮವನರಿತು ಸಂಶಯದಿಂದ ಕಾವ್ಯವೇ ಭಿನ್ನರಾಗಬಹುದೆಂದು ಭಾವಿಸಿ ಒಪ್ಪುತ್ತಾಳೆ. ಆದರೆ ಜಕ್ಕಣಾಚಾರ್ಯರರು ಒಪ್ಪದೆ ಮೂರ್ತಿ ಅವಸಾನಗೊಳ್ಳುವಂತಾಗುತ್ತದೆ. ಚನ್ನಕೇಶವನ ಮೂರ್ತಿ ಮುಕ್ಕಾಗುವುದರಿಂದ ಸಂಶಯ ನಿವಾರಣೆ ಯಾದಂತಾಗುತ್ತದೆ. ಶಾಂತಲೆಯು ಶಿವಗಂಗೆಯಲ್ಲಿ ಸಲ್ಲೇಖನ ತೆಗೆದುಕೊಂಡು ವಿಜಯ ನರಸಿಂಹನಿಗೆ ಪಟ್ಟಕ್ಕೆ ಸೂಚಿಸಿದಾಗ ಅಸೂಯೆಯನ್ನು ಹೊಂದಿದ ರಾಣಿಯರು ನಂತರ ಮನುಷ್ಯತ್ವ ಮೆರೆಯುತ್ತಾರೆ. ಸ್ವಾರ್ಥವನ್ನು ತ್ಯಜಿಸಿ ಶಾಂತಲೆಯಲ್ಲಿ ಕ್ಷಮೆ ಬೇಡುತ್ತಾರೆ.

'ಮನೆಯೊಳಗಣ ಕಿಚ್ಚು' ರಾಜನ ಅರಮನೆಯಲ್ಲಿಯೇ ತಳೆದ ಮಸ್ತರ ಅಸೂಯೆ ಸ್ವಾರ್ಥವನ್ನು ಚಿತ್ರಿಸುತ್ತದೆ. ಚನ್ನಕೇಶವನ ಶಿಲ್ಪದ ನಾಶದಲ್ಲಿ ಸ್ವಾರ್ಥವನ್ನು ಅಂತ ಕಂಡು ವಿಜಯನಾರಾಯಣನ ರೂಪದಲ್ಲಿ ಪ್ರೀತಿ ವಿಶ್ವಾಸಗಳು ಮೂಡುತ್ತವೆ. ಇದು ಸಾ.ಶಿ.ಮ ರವರ ಕೃತಿ ಶೈಲಿಯನ್ನು ತಿಳಿಸುತ್ತದೆ. ಹಾಗಾಯೇ ಸ್ವಾರ್ಥ ಅಸೂಯೆಯು ಮನುಷ್ಯನನ್ನು ದುರಂತಕ್ಕೆ ತಳ್ಳಬಹುದೆಂಬ ಮಾರ್ಮಿಕವಾದ ಸಂದೇಶವು ಮೂಡಿದೆ.

ಹೀಗೆ ಸಾ. ಶಿ.ಮರವರು ರಚಿಸಿರುವ ನೃತ್ಯರೂಪಕಗಳಲ್ಲಿ ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು ಒಳಗೊಂಡಿದ್ದು. ಅವು ಸರ್ವಕಾಲಕ್ಕೂ ಸತ್ಯವಾದವುಗಳಾಗಿವೆ. ಸಮಾಜದ ಜನತೆಗೆ ಸಮಕಾಲೀನ ವಿಚಾರಗಳ ಜೊತೆಗೆ ಭವಿಷ್ಯದ ಹಾಗೂ ಹೋಗುಗಳ ಬಗ್ಗೆ ಕುರಿತು ನಿರ್ಮಾಣವಾಗಲು ಸಹಕಾರಿಯಾಗಿ ನಿಲ್ಲುತ್ತವೆ.

## ಪರಾಮರ್ಶನ ಗ್ರಂಥಗಳು


1. ಮರುಳಯ್ಯ ಸಾ.ಶಿ. 1996, ನೃತ್ಯರೂಪಕಗಳು (ಇಪ್ಪತ್ತೈದು), ರಾಗಿಣಿ ಶಿಕ್ಷಣ ಪ್ರತಿಷ್ಠಾನ, ಬೆಂಗಳೂರು.
2. ಮರುಳಯ್ಯ ಸಾ.ಶಿ. 1999, ಸ್ನೋವೈಟ್ ಮತ್ತು ಇತರ ನೃತ್ಯರೂಪಕಗಳು, ರಾಗಿಣಿ ಶಿಕ್ಷಣ ಪ್ರತಿಷ್ಠಾನ, ಬೆಂಗಳೂರು.
3. ಗೌರೀಶ್ ಕಾಯ್ಕಿಣಿ, 1983, ಸ್ವಾತಂತ್ರ್ಯೋತ್ತರ ವಿಚಾರ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
4. ನಾರಾಯಣ್ ಪಿ.ವಿ(ಸಂ), 2001, ಇಷಾಂಶು, ಸಾ.ಶಿ. ಮರುಳಯ್ಯ ಗೌರವ ಗ್ರಂಥ, ಡಾ.ಸಾ.ಶಿ. ಮರುಳಯ್ಯ ಅಭಿನಂದನಾ ಸಮಿತಿ, ಬೆಂಗಳೂರು.
5. ಪೂಜಾರ ಗದಿಗೆಮ್ಮ, 2000, ಡಾ.ಎಚ್.ತಿಪ್ಪೇರುದ್ರಸ್ವಾಮಿಗಳವರ ವಿಚಾರ ಸಾಹಿತ್ಯ, ಶರಣರಶ್ಮಿ ಪ್ರಕಾಶನ, ಗುಲ್ಬರ್ಗಾ.
6. ಮರುಳಯ್ಯ ಸಾ.ಶಿ, 2003, ಬಸವಣ್ಣನವರ ಸಿದ್ಧಾಂತಗಳು, ಶ್ರೀ ಬಸವೇಶ್ವರ ಪೀಠ, ಧಾರವಾಡ.
7. ಶಾಂತಿನಾಥ ದಿಬ್ಬದ ಮತ್ತು ಬಸವರಾಜ ಸಬರದ (ಸಂ), 2005, ವೈಚಾರಿಕ ಲೇಖನಗಳು, ಪ್ರಸಾರಾಂಗ ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ.
8. ಶಿವರಾಮ ಕಾರಂತ ಕೆ, 1999, ಬಾಳ್ವೆಯ ಬೆಳಕು, ಎಸ್.ವಿ.ಸಿ.

ಪಬ್ಲಿಕೇಶನ್, ಬೆಂಗಳೂರು.
9. ವಾಗೀಷ ಎಂ. ಆರ್. 2012, ಸಾ.ಶಿ. ಮರುಳಯ್ಯನವರ ಸಮಗ್ರ ಸಾಹಿತ್ಯ ಒಂದು ಅಧ್ಯಯನ, ಮಧುರೈ ಕಾಮರಾಜ ವಿಶ್ವವಿದ್ಯಾಲಯ, ಮಧುರೈ.
10. ಹಿಮ್ಮಡಿ ವೈ.ಬಿ 2006, ಕನ್ನಡದಲ್ಲಿ ವೈಚಾರಿಕ ಸಾಹಿತ್ಯ ಒಂದು ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.